ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮದ್ ನವಾಜ್

ಎಚ್. ಬಸವನಗೌಡ ಅಲಿಯಾಸ್ ಬಸವ -ವಿರುದ್ಧ ಹುಸ್ಸೈನಿ ಮತ್ತು ಇತರರು

ಎಂಎಫ್ಸಂಖ್ಯೆ: 23417/2013 (ಎಂಬಿ) ಇದರೊಂದಿಗೆ ಇತರೆ, ದಿನಾಂಕ 29 ನೇ ಅಕ್ಟೋಬರ್ 2018

ತೀರ್ಪು

ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ:

ಎರಡೂ ಕಡೆಯ ಮಾನ್ಯ ವಕೀಲರ ಸಮ್ಮತಿಯೊಂದಿಗೆ ಈ ಅಪೀಲುಗಳನ್ನು ಅಂಗೀಕರಿಸುವುದಕ್ಕೆ ಪಟ್ಟಿ ಮಾಡಿದ್ದರೂ, ಅವುಗಳನ್ನು ಅಂತಿಮವಾಗಿ ಆಲಿಸಲಾಗಿದೆ.

2. ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ-IX (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ನ್ಯಾಯಾಧಿಕರಣ ' ಎಂದು ಕರೆಯಲಾಗಿದೆ) ಬಳ್ಳಾರಿ-ಇವರು ಎಂವಿಸಿಸಂಖ್ಯೆ: 358/2012 ರಲ್ಲಿ ಹೊರಡಿಸಿದದಿನಾಂಕ: 05.11.2012 ರ ತೀರ್ಪು ಹಾಗೂ ಐತೀರ್ಪುಗಳೆರಡನ್ನು ಖಂಡಿಸಿ, ವಿಮಾ ಕಂಪನಿಯು ಎಂಎಫ್ಎಸಂಖ್ಯೆ: 20844/2013 ನ್ನು ಸಲ್ಲಿಸುವಾಗ ಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಕೇಮುದಾರನು ಎಂಎಫ್ಸಂಖ್ಯೆ: 23417/2013 ನ್ನು ಸಲ್ಲಿಸಿದ್ದಾರೆ.

3. ಅನುಕೂಲಕ್ಕೋಸ್ಕರ, ಪಕ್ಷಕಾರರನ್ನು ಅವರ ಸ್ಥಾನಮಾನಕ್ಕನುಗುಣವಾಗಿ ನ್ಯಾಯಾಧಿಕರಣದ ಮುಂದೆ ಉಲ್ಲೇಖಿಸತಕ್ಕದ್ದು.

4. ಕ್ಲೇಮುದಾರನ ವಾದವೆಂದರೆ, ಅವನು 2 ನೇ ಎದುರುದಾರನಿಗೆ ಸೇರಿದ ನೋಂದಣಿಸಂಖ್ಯೆ: ಕೆಎ -34/6448 ನ್ನು ಹೊಂದಿರುವ ಲಾರಿಯಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದನು ಮತ್ತು 1 ನೇ ಎದುರುದಾರನು ಸದರಿ ಲಾರಿಯ ಚಾಲಕನಾಗಿದ್ದನು.ದಿನಾಂಕ: 09.06.2011 ರಂದು ಕೇಮುದಾರನು ಚಾಲಕನೊಂದಿಗೆ ಸದರಿ ಲಾರಿಯಲ್ಲಿ ಜಲ್ಲಿಕಲ್ಲನ್ನು ಅನ್ಲೋಡ್ ಮಾಡುವುದಕ್ಕಾಗಿ ಬಿ. ಬೆಳಗಲ್ಲಿನಿಂದ ಬಳ್ಳಾರಿಗೆ ಪ್ರಯಾಣಿಸುತ್ತಿದ್ದ.ಅವರು ಬಳ್ಳಾರಿಯ ನಂದಿ ಇಂಟರ್ನ್ಯಾಷನಲ್ ಕಾಲೇಜಿನ ಬಳಿ ಹೋಗುತ್ತಿದ್ದಾಗ ಬೆಳಿಗ್ಗೆ ಸುಮಾರು 8.30 ರಲ್ಲಿ ಚಾಲಕನು ೧ ಲಾರಿಯನ್ನು ದುಡುಕಿನ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸಿ, ರಸ್ತೆ ಬದಿಯಲ್ಲಿ D ನಿಲುಗಡೆ ಮಾಡಲಾಗಿದ್ದ, ನೋಂದಣಿಸಂಖ್ಯೆ: ಕೆಎ -35/921 ನ್ನು ಹೊಂದಿರುವ ಇನ್ನೊಂದು ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆಸಿದನು.ಇದರ ಪರಿಣಾಮವಾಗಿ, ಕ್ಲೇಮುದಾರನಿಗೆ ತೀವ್ರ ಫ್ಯಾಕ್ಚರ್ ಗಾಯಗಳಾದವು.ಅವನನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ಆ ನಂತರ, ಆತನನ್ನು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಕಳುಹಿಸಿದ್ದು, ಅಲ್ಲಿ ಅವನು ಒಳರೋಗಿಯಾಗಿ ಚಿಕಿತ್ಸೆ ಪಡೆದನು.ಕ್ಲೇಮುದಾರನು ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು, ಅವನ ಬಲಗಾಲನ್ನು ಮಂಡಿಯವರೆಗೆ ಕತ್ತರಿಸಲಾಯಿತು.ಕೇಮುದಾರನು ಅತಿ ಹೆಚ್ಚು ವೈದ್ಯಕೀಯ ವೆಚ್ಚಗಳನ್ನು ಭರಿಸಿದನು.1 ನೇ ಎದುರುದಾರನು 2 ನೇ ಎದುರುದಾರನಿಗೆ ಸೇರಿದ ಆಪಾದಿತ ಲಾರಿಯ ಚಾಲಕನಾಗಿದ್ದುದರಿಂದಾಗಿ, ಪಾಲಿಸಿಯು 3 ನೇ ಎದುರುದಾರನ ಹೆಸರಿನಲ್ಲಿದ್ದುದರಿಂದಾಗಿ; 4 ನೇ ಎದುರುದಾರ ವಿಮಾ ಕಂಪನಿ ವಾಹನದ ವಿಮೆ ಮಾಡಿಸಿದ್ದುದರಿಂದಾಗಿ ಮತ್ತು ಅಪಘಾತದ ದಿನಾಂಕದಂದು ಇದ್ದಂತೆ ವಾಹನವು ವಿಮೆಗೊಳಪಟ್ಟಿದ್ದುದರಿಂದಾಗಿ, ಕೇಮುದಾರನು ಮೋಟಾರು ವಾಹನಗಳ ಅಧಿನಿಯಮ, 1988 ರ 166 ನೇ ಪ್ರಕರಣದಡಿ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಎಂ.ವಿ. ಅಧಿನಿಯಮ ' ಎಂದು ಕರೆಯಲಾಗಿದೆ) ನೋಂದಣಿಸಂಖ್ಯೆ: ಕೆಎ -35/921 ನ್ನು ಹೊಂದಿರುವ ಲಾರಿಯ ಚಾಲಕ ಮತ್ತು ಮಾಲೀಕನನ್ನು 5 ನೇ ಮತ್ತು 6

ನೇ ಎದುರುದಾರರನ್ನಾಗಿ ಹಾಗೂ ಸದರಿ ಲಾರಿಯ ವಿಮಾಕರ್ತನನ್ನು 7 ನೇ ಎದುರುದಾರನನ್ನಾಗಿ ಮಾಡುವ ಮೂಲಕ ವಿವಿಧ ಶೀರ್ಷಿಕೆಗಳ ಆಧಾರದ ಮೇಲೆ ಪರಿಹಾರವನ್ನು ಕೋರಿ, ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ.

5. ನ್ಯಾಯಾಧಿಕರಣದಿಂದ ಜಾರಿ ಮಾಡಲಾದ ನೋಟೀಸಿಗೆ ಪ್ರತಿಕ್ರಿಯೆಯಾಗಿ 1 ಮತ್ತು 2 ನೇ ಎದುರುದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದರೆ, 3 ಮತ್ತು 4 ನೇ ಎದುರುದಾರರು ತಮ್ಮ ತಮಗೆ ಸಂಬಂಧಪಟ್ಟ ವಕೀಲರ ಮುಖಾಂತರ ಹಾಜರಾದರು ಹಾಗೂ 7 ನೇ ಎದುರುದಾರ/ಇನ್ನೊಂದು ವಿಮಾ ಕಂಪನಿಯು ಸಹ ತನಗೆ ಸಂಬಂಧಪಟ್ಟ ವಕೀಲರ ಮುಖಾಂತರ ಹಾಜರಾದರು.4 ಮತ್ತು 7 ನೇ ಎದುರುದಾರರನ್ನು ಹೊರತುಪಡಿಸಿ, ಇತರ ಎದುರುದಾರರಾರೂ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ.

6. ನೋಂದಣಿಸಂಖ್ಯೆ: ಕೆಎ -34/6448 ನ್ನು ಹೊಂದಿರುವ ಲಾರಿಯ ವಿಮಾಕರ್ತನಾದ 4 ನೇ ಎದುರುದಾರನು ಅಪಘಾತದ ಕಾರ್ಯ ಕಾರಣ ಸಂಬಂಧವನ್ನು ಹಾಗೂ ಕ್ಲೇಮುದಾರನಿಗೆ ತೀವ್ರ ಗಾಯಗಳಾಗಿದ್ದವೆಂಬ ಸಂಗತಿಯನ್ನು ನಿರಾಕರಿಸಿದ್ದಾನೆ.ಅಷ್ಟೇ ಅಲ್ಲದೆ, ಲಾರಿಯ ಚಾಲಕನು ಅಪಘಾತದ ದಿನದಂದು ಇದ್ದಂತೆ ಸಿಂಧುವಾದ ಹಾಗೂ ಚಾಲ್ತಿಯಲ್ಲಿರುವ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಹಾಗೂ ಯಾವುದೇ ಸಿಂಧುವಾದ ಪರ್ಮಿಟ್ ಇಲ್ಲದೆ ವಾಹನ ಚಲಾಯಿಸಿದ್ದಾನೆಂದು ವಾದಿಸಿದ್ದಾನೆ.ಅಷ್ಟೇ ಅಲ್ಲದೆ, ನೋಂದಣಿಸಂಖ್ಯೆ: ಕೆಎ -35/921 ನ್ನು ಹೊಂದಿರುವ ಲಾರಿಯ ಚಾಲಕನ ಕಡೆಯಿಂದ ಸಾಕಷ್ಟು ನಿರ್ಲಕ್ಷ್ಯವಾಗಿದೆಯೆಂದು ವಾದಿಸಿದ್ದನು.ವಿಮಾ ಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳ ಉಲ್ಲಂಘನೆಯಾಗಿತ್ತೆಂದು ಮತ್ತು ಆ ಕಾರಣದಿಂದ 4 ನೇ ಎದುರುದಾರ/ವಿಮಾ ಕಂಪನಿಯು ಐತೀರ್ಪನ್ನು ಮನವರಿಕೆ ಮಾಡಿಸಲು ಹೊಣೆಯಾಗಿರಲಿಲ್ಲ ಮತ್ತು ಹೀಗಾಗಿ, ಕ್ಲೇಮು ಅರ್ಜಿಯನ್ನು ವಜಾಗೊಳಿಸಲು ಕೋರಿದೆ.

7. ನೋಂದಣಿಸಂಖ್ಯೆ: ಕೆಎ -35/921 ನ್ನು ಹೊಂದಿರುವ ಲಾರಿಯ ವಿಮೆಯನ್ನು ಮಾಡಿಸಿಕೊ ಂ ಡಿರುವ 7 ನೇ ಎದುರುದಾರ/ವಿಮಾ ಕಂಪನಿಯ ಪರ ಹಾಜರಾದ ಮಾನ್ಯ ವಕೀಲರು, ಅಪಘಾತವು 1 ನೇ ಎದುರುದಾರ/ನೋಂದಣಿಸಂಖ್ಯೆ: ಕೆಎ -34/6448 ನ್ನು ಹೊಂದಿರುವ ಲಾರಿ ಚಾಲಕನ ಏಕಮಾತ್ರ ದುಡುಕು ಹಾಗೂ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿದೆ ಎಂದು ನಿರ್ದಿಷ್ಟವಾಗಿ ವಾದಿಸಿದ್ದಾರೆ.5 ನೇ ಎದುರುದಾರ/ಲಾರಿಯ ಚಾಲಕನ ಕಡೆಯಿಂದ ಯಾವುದೇ ಅಲಕ್ಷದ ಅಜಾಗರೂಕತೆ ಉಂಟಾಗಿಲ್ಲದ ಕಾರಣ 7 ನೇ ಎದುರುದಾರ/ವಿಮಾ ಕಂಪನಿಯು ಐತೀರ್ಪನ್ನು ಮನವರಿಕೆ ಮಾಡಿಸಲು ಹೊಣೆಯಾಗಿರಲಿಲ್ಲ.ಹೀಗಾಗಿ, 7 ನೇ ಎದುರುದಾರ/ವಿಮಾ ಕಂಪನಿಯು ಕ್ಲೇಮು ಅರ್ಜಿಯನ್ನು ವಜಾಗೊಳಿಸಲು ಕೋರಿದೆ.

8. ಪರಸ್ಪರ ವಿರೋಧದ ವಾದ ಪ್ರತಿವಾದಗಳ ಆಧಾರದ ಮೇಲೆ ನ್ಯಾಯಾಧಿಕರಣವು ಈ ಮುಂದಿನ ವಿವಾದಾಂಶಗಳನ್ನು ಮತ್ತು ತನ್ನ ಪರ್ಯಾಲೋಚನೆಗಾಗಿನ ಹೆಚ್ಚುವರಿ ವಿವಾದಾಂಶವನ್ನು ರೂಪಿಸಿದೆ:

(i) ನೋಂದಣಿಸಂಖ್ಯೆ: ಕೆಎ 34/6448 ನ್ನು ಹೊಂದಿರುವ ಲಾರಿಯ ಚಾಲಕನಾದ 1 ನೇ ಎದುರುದಾರನು ತನ್ನ ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆಯ ಕಾರಣದಿ ಂ ದ ದಿನಾ ಂ ಕ:09.06.2011 ರಂದು ಬೆಳಿಗ್ಗೆ 8.30 ಕ್ಕೆ ನಂದಿ ಇಂಟರ್ ನ್ಯಾಷನಲ್ ಕಾಲೇಜಿನ ಬಳಿ ಯಾವುದೇ ಎಚ್ಚರಿಕೆ ತೆಗೆದುಕೊಳ್ಳದೆ ನಿಲುಗಡೆ ಮಾಡಲಾಗಿದ್ದ ನೋಂದಣಿಸಂಖ್ಯೆ: ಕೆಎ 35/921 ನ್ನು ಹೊಂದಿರುವ ಲಾರಿಗೆ ಡಿಕ್ಕಿ ಹೊಡೆದದ್ದರಿಂದ ಅಪಘಾತ ಸಂಭವಿಸಿದ್ದು, ಅದರ ಪರಿಣಾಮವಾಗಿ ಅರ್ಜಿದಾರನು ತೀವ್ರವಾಗಿ ಗಾಯಗೊಂಡಿದ್ದಾನೆ ಎಂಬುದನ್ನು ಅರ್ಜಿದಾರನು ಸಾಬೀತುಪಡಿಸುವನೆ?

(ii) ನೋಂದಣಿಸಂಖ್ಯೆ: ಕೆಎ 34/6448 ನ್ನು ಹೊಂದಿರುವ ಲಾರಿಯನ್ನು ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆ ಮಾಡಿದ್ದರಿಂದಲೇ ಅದು ಸ್ಟೇಷನರಿ ಲಾರಿಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಅದರಂತೆ, ನಿಲ್ಲಿಸಿದ್ದ ಲಾರಿಯ ವಿಮಾಕರ್ತನು ಪರಿಹಾರ ನೀಡಲು ಹೊಣೆಯಾಗಿಲ್ಲವೆಂದು 7 ನೇ ಎದುರುದಾರ/ನೋಂದಣಿಸಂಖ್ಯೆ: ಕೆಎ -35/921 ನ್ನು ಹೊಂದಿರುವ ಲಾರಿಯ ವಿಮಾ ಕಂಪನಿಯು ಸಾಬೀತುಪಡಿಸುವುದೇ?

(iii) ಅರ್ಜಿದಾರನು ತಾನು ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿದ್ದಾನೆಂದು ಸಾಬೀತುಪಡಿಸುವನೆ?ಹಾಗಿದ್ದಲ್ಲಿ, ಅಗತ್ಯ ಪರಿಮಾಣ ಎಷ್ಟು?ಯಾರಿಂದ ಪಡೆಯುವುದು?

(iv) ಯಾವ ಐತೀರ್ಪು ಅಥವಾ ಆದೇಶ ಜಾರಿಯಾಗಿದೆ?

10.07.2012 ರಂದು ರೂಪಿಸಲಾದ ಹೆಚ್ಚುವರಿ ವಿವಾದಾಂಶ

(i) ನೋಂದಣಿಸಂಖ್ಯೆ: ಕೆಎ -34/6448 ನ್ನು ಹೊಂದಿರುವ ಲಾರಿಯ ಚಾಲಕನಾಗಿರುವ 1 ನೇ ಎದುರುದಾರನು ಅಪಘಾತದ ದಿನಾಂಕದಂದು ಇದ್ದಂತೆ, ಅಂಥ ಪ್ರವರ್ಗದ ವಾಹನವನ್ನು ಚಾಲನೆ ಮಾಡಲು ಸಿಂಧುವಾದ ಮತ್ತು ಚಾಲ್ತಿಯಲ್ಲಿರುವ ಚಾಲನಾ ಪರವಾನಗಿಯನ್ನು ಹೊಂದಿರದಿದ್ದು, ಅದರಂತೆ ವಿಮಾ ಕಂಪನಿಯು ಯಾವುದೇ ಪರಿಹಾರವನ್ನು ಪಾವತಿಸಲು ಹೊಣೆಯಾಗಿಲ್ಲ ಎಂಬುದನ್ನು 1 ನೇ ಎದುರುದಾರನು ಸಾಬೀತುಪಡಿಸುವನೆ?

9. ಕೇಮುದಾರನು ತನ್ನ ವಾದದ ಸಮರ್ಥನೆಗಾಗಿ ತನ್ನನ್ನು ಪಿಡಬ್ಲ್ಯು -1 ಎಂಬುದಾಗಿ ವಿಚಾರಣೆಗೊಳಪಡಿಸಿದ್ದಾನೆ ಮತ್ತು ಡಾ. ಷಡ್ರಕ್ ಎನ್.ವಿ.ಯನ್ನು ಪಿಡಬ್ಲ್ಯು -2 ಎಂಬುದಾಗಿ ವಿಚಾರಣೆ ಮಾಡಲಾಯಿತು.ನಿಶಾನೆ ಪಿ .1 ರಿಂದ ನಿಶಾನೆ ಪಿ .77 ರ ವರೆಗಿನ ದಸ್ತಾವೇಜುಗಳನ್ನು ಗುರುತಿಸಲಾಯಿತು; ವಿಮಾ ಕಂಪನಿಯು ಆರ್.ಡಬ್ಲ್ಯು -1 ಮತ್ತು ಆರ್ ಡಬ್ಲ್ಯು -2 ರ ಸಾಕ್ಷ್ಯವನ್ನು ಒದಗಿಸಿದ ಸಮಯದಲ್ಲಿ ನಿಶಾನೆ.ಆರ್ .1 ರಿಂದ ನಿಶಾನೆ.ಆರ್ .5 ರವರೆಗಿನ ದಸ್ತಾವೇಜುಗಳನ್ನು ಸಾಕ್ಷ್ಯದಲ್ಲಿ ಗುರುತು ಮಾಡಲಾಯಿತು.

10. ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದ ಮೇಲೆ, ನ್ಯಾಯಾಧಿಕರಣವು 1 ನೇ ಮತ್ತು 2 ನೇ ವಿವಾದಾಂಶಗಳಿಗೆ ಸಕಾರಾತ್ಮಕವಾಗಿಯೂ, 1 ನೇ ಹೆಚ್ಚುವರಿ ವಿವಾದಾಂಶಕ್ಕೆ ನಕಾರಾತ್ಮಕವಾಗಿಯೂ, 3 ನೇ ವಿವಾದಾಂಶಕ್ಕೆ ಭಾಗಶಃ ಸಕಾರಾತ್ಮಕವಾಗಿಯೂ ಉತ್ತರಿಸಿದೆ ಮತ್ತು ಅರ್ಜಿದಾರನು ಕ್ಲೇಮು ಅರ್ಜಿಯ ದಿನಾಂಕದಿಂದ ಠೇವಣಿಯವರೆಗೆ ವಾರ್ಷಿಕ ಶೇ .6 ರ ಬಡ್ಡಿದರದೊಂದಿಗೆ ರೂ .10,70,200/-ಗಳ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಂದು ನಿರ್ಧರಿಸಿದೆ; 5 ರಿಂದ 7 ರ ವರೆಗಿನ ಎದುರುದಾರರ ವಿರುದ್ಧ ಸಲ್ಲಿಸಿದ್ದ ಕ್ಲೇಮು ಅರ್ಜಿಯನ್ನು ವಜಾ ಮಾಡಲಾಯಿತು; ಮೊತ್ತದ ಠೇವಣಿಗಾಗಿ ನಿರ್ದೇಶನಗಳನ್ನೂ ಸಹ ನ್ಯಾಯಾಧಿಕರಣವು ನೀಡಿರುತ್ತದೆ.

11. ನ್ಯಾಯಾಧಿಕರಣವು ನೀಡಿದ ಅತಿ ಕಡಿಮೆ ನಷ್ಟಪರಿಹಾರದಿಂದ ಬಾಧಿತನಾಗಿ ಕ್ಲೇಮುದಾರನು, ಎಂಎಫ್ಎಸಂಖ್ಯೆ: 23417/2013 ನ್ನು ಸಲ್ಲಿಸಿದ್ದಾನೆ; ಐತೀರ್ಪನ್ನು ಮನವರಿಕೆ ಮಾಡಿಸುವ ಹೊಣೆಗಾರಿಯ ಪ್ರಶ್ನೆ ಮತ್ತು ನೀಡಲಾದ ನಷ್ಟಪರಿಹಾರದ ಪರಿಮಾಣದ ಆಧಾರದ ಮೇಲೆ 4 ನೇ ಎದುರುದಾರ ವಿಮಾ ಕಂಪನಿಯು ಎಂಎಫ್ಎಸಂಖ್ಯೆ: 20844/2013 ನ್ನು ಸಲ್ಲಿಸಿದ್ದು, ಅದರಲ್ಲಿ ಐಎಸಂಖ್ಯೆ: 2/2017 ಎಂಬುದು ಅ ಹೆಚ್ಚುವರಿ ದಾಖಲೆಗಳನ್ನೂ ಹಾಜರುಪಡಿಸುವುದಕ್ಕಾಗಿ ಸಲ್ಲಿಸಿದ ಅರ್ಜಿಯಾಗಿದೆ.

12. ನಾವು ಕ್ಲೇಮುದಾರನ ಪರ ಮಾನ್ಯ ವಕೀಲರ ಮತ್ತು 4 ನೇ ಎದುರುದಾರ/ವಿಮಾ ಕಂಪನಿಯ ಪರ ಮಾನ್ಯ ವಕೀಲರ ಹಾಗೂ 7 ನೇ ಎದುರುದಾರ/ವಿಮಾ ಕಂಪನಿಯ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದೇವೆ ಮತ್ತು ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಹಾಗೂ ಮೂಲ ದಾಖಲೆಯನ್ನು ಪರಿಶೀಲಿಸಿದ್ದೇವೆ.

13. ನ್ಯಾಯಾಧಿಕರಣವು ಕ್ಲೇಮುದಾರನಿಗೆ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಡಬ್ಲ್ಯುಸಿ ಅಧಿನಿಯಮ ಎಂದು ಕರೆಯಲಾಗಿದೆ) ಉಪಬಂಧಗಳಡಿ ನಿಗದಿತ ಮಿತಿಗಿಂತ ಹೆಚ್ಚಿನ ನಷ್ಟಪರಿಹಾರವನ್ನು ನೀಡಿರುವುದು ಸರಿಯಲ್ಲ ಎಂದು 4 ನೇ ಎದುರುದಾರ/ವಿಮಾ ಕಂಪನಿಯ ಪರ ಮಾನ್ಯ ವಕೀಲರು ವಾದಿಸಿದ್ದಾರೆ.ಸದರಿ ವಾದವನ್ನು ವಿಸ್ಕೃತಗೊಳಿಸಿ ಮಾನ್ಯ ವಕೀಲರು, ಕೇಮುದಾರನು 2ನೇ ಎದುರುದಾರ/ತಿಮ್ಮಪ್ಪ ಎಂಬುವವರ ಬಳಿ ಉದ್ಯೋಗಿಯಾಗಿದ್ದನು ಮತ್ತು ಕ್ಲೇಮುದಾರನು ಸಲ್ಲಿಸಿದ ಕ್ಲೇಮ ಅರ್ಜಿಯನ್ನು ಡಬ್ಲ್ಯುಸಿ ಅಧಿನಿಯಮದ ಉಪಬಂಧಗಳ ಪ್ರಕಾರ ನ್ಯಾಯ ನಿರ್ಣಯ ಮಾಡಬೇಕಿತ್ತು ಮತ್ತು ನಷ್ಟ ಪರಿಹಾರವನ್ನು ಡಬ್ಲ್ಯುಸಿ ಅಧಿನಿಯಮದ ಉಪಬಂಧಗಳಡಿ ನಿರ್ಧರಿಸಬೇಕಿತ್ತೇ ಹೊರತು ಎಂ.ವಿ. ಅಧಿನಿಯಮದ ಉಪಬಂಧಗಳ ಪ್ರಕಾರ ಅಲ್ಲ. ಏಕೆಂದರೆ ಕ್ಲೇಮುದಾರ/ಕ್ಲೀನರ್ನ ಹೊಣೆಗಾರಿಕೆಯನ್ನು ಒಳಗೊಂಡ ಆಪಾದಿತ ಲಾರಿಯ ಮಾಲೀಕನು ಹೆಚ್ಚುವರಿ ಪ್ರೀಮಿಯಂ ಪಾವತಿಸಿರುವುದಿಲ್ಲ ಎಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ಪಾಲಿಸಿಯು ಸೀಮಿತ ಹೊಣೆಗಾರಿಕೆಯ ಪಾಲಿಸಿಯಾಗಿದೆ ಮತ್ತು ಆದುದರಿಂದ,

ಲಾರಿಯ ಮಾಲೀಕ ಅಥವಾ ಲಾರಿಯ ವಿಮಾ ಪಾಲಿಸಿದಾರನಿಂದ ಯಾವುದೇ ಹೆಚ್ಚು ವರಿ ಪ್ರೀಮಿಯಂ ಬಂದಿರದಿದ್ದು, ಚ ಡಬ್ಲ್ಯುಸಿ ಅಧಿನಿಯಮದ ಉಪಬಂಧಗಳಡಿ ನಿರ್ಧರಿಸಲಾಗಿದ್ದಕ್ಕಿಂತ ಹೆಚ್ಚಿನ ಹೊಣೆಯನ್ನು ವಿಮಾಕರ್ತನ ಮೇಲೆ ಹೊರಿಸಿರಬಹುದಾಗಿತ್ತೆಂದು ವಾದಿಸಲಾಗಿದೆ.ಎಂ.ವಿ. ಅಧಿನಿಯಮದ ಉಪಬಂಧಗಳಡಿ ನೀಡಲಾದ ಮೊತ್ತವು, ಡಬ್ಲ್ಯುಸಿ ಅಧಿನಿಯಮದಡಿ ಕ್ಲೇಮುದಾರನು ಯಾವುದಕ್ಕೆ ಹಕ್ಕುಳ್ಳವನಾಗಿರುತ್ತಾನೋ ಅದಕ್ಕಿಂತ ಹೆಚ್ಚಾಗಿದ್ದಲ್ಲಿ, ವಿಮಾಕರ್ತನ ಹೊಣೆಗಾರಿಕೆಯು ಡಬ್ಲ್ಯುಸಿ ಅಧಿನಿಯಮದಡಿ ಸೀಮಿತವಾಗಿದೆ ಮತ್ತು ಸದರಿ ಮಿತಿಗಿಂತ ಹೆಚ್ಚಾದ ನಷ್ಟ ಪರಿಹಾರದ ಹೊಣೆಯನ್ನು ಆಪಾದಿತ ವಾಹನದ ಮಾಲೀಕನು ಹೊರಬೇಕಾಗುತ್ತದೆಯೆಂದು ವಾದಿಸಿಲಾಗಿದೆ.ಈ ಸಂಬಂಧ, ಅವರು ಓರಿಯೆಂಟಲ್ ಇನ್ಶೂರೆನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಸಲ್ವಡೊರ್ ಸೇವರ್ ಫರ್ನಾಂಡಿಸ್ ಮತ್ತು ಇತರರು - 2000 ಎಸಿಜೆ 508, ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.

14. ಇದಕ್ಕೆ ವಿರೋಧವಾಗಿ, ವಿಮಾಕರ್ತನ ಪರ ಮಾನ್ಯ ವಕೀಲರು, ಈ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಿದ್ದಾಗ ಈ ನ್ಯಾಯಾಲಯದಿಂದ ಸಹ ಉದ್ಭವಿಸಿದ ರಾಮಚಂದ್ರ -ವಿರುದ್ಧ ರೀಜನಲ್ ಮ್ಯಾನೇಜರ್, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಅಮಿಟೆಡ್ - ಎ.ಐ.ಆರ್. 2013 ಎಸ್.ಸಿ. 2561 2013 ಎಸ್.ಸಿ.ಜೆ. 2205, ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯದ ಇತ್ತೀಚಿನ ತೀರ್ಪು ಉಪಯುಕ್ತವಾಗಿದ್ದು, ಅದರಲ್ಲಿ, ವಿಮಾಕಂಪನಿಯು ಕೆಳ ನ್ಯಾಯಾಲಯದ ಮುಂದೆ ಎಂದರೆ, ಎಂಎಸಿಟಿ ಮುಂದೆ ವಾದವನ್ನು ಮಂಡಿಸಲು ವಿಫಲವಾದಲ್ಲಿ ಮತ್ತು ಡಬ್ಲ್ಯುಸಿ ಅಧಿನಿಯಮದಡಿ ಎಷ್ಟು ಪಾವತಿಸಬಹುದಿತ್ತೋ ಅದನ್ನು ಮೀರಿ ಯಾವುದೇ ನಷ್ಟ ಪರಿಹಾರಕ್ಕೆ ಕ್ಲೇಮುದಾರನು ಅರ್ಹನಲ್ಲವೆಂದು ಸಹ ವಾದಿಸದಿದ್ದಲ್ಲಿ, ಹೆಚ್ಚುವರಿ ಪ್ರೀಮಿಯಂ ಅನ್ನು ಪಾವತಿಸದ ಕಾರಣದಿಂದ ಕರಾರುಜನ್ಯ ಹೊಣೆಗಾರಿಕೆ ಇಲ್ಲದಿರುವ ದೃಷ್ಟಿಯಿಂದ ವಿಮಾಕರ್ತನು ಎಂ.ವಿ. ಅಧಿನಿಯಮದಡಿ ಅದರ ಹೊಣೆಯಿಂದ ವಿಮುಕ್ತನಾಗಲು ಕ್ಲೇಮು ಮಾಡಲಾಗದು ಎಂದು ಸದರಿ ತೀರ್ಪಿನಲ್ಲಿ ನಿರ್ಧರಿಸಲಾಗಿದೆಯೆಂದು ಕ್ಲೇಮುದಾರನ ಪರ ಮಾನ್ಯ ವಕೀಲರು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ರಾಮಚಂದ್ರ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ವಿಧ್ಯುಕ್ತ ಹೇಳಿಕೆಯ ದೃಷ್ಟಿಯಿಂದ, ಸಲ್ವಡೊರ್ ಸೇವರ್ ಫರ್ನಾಂಡಿಸ್ ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪು ಅನ್ವಯವಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ.

15. ನಷ್ಟ ಪರಿಹಾರದ ನೀಡಿಕೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಕ್ಲೇಮುದಾರನ ಬಲಗಾಲಿಗೆ ಗಂಭೀರ ಗಾಯಗಳಾಗಿದ್ದು, ಅದನ್ನು ಮಂಡಿಯವರೆಗೆ ಕತ್ತರಿಸಬೇಕಾಯಿತು ಎಂದು ಅರ್ಜಿದಾರ/ಕ್ಲೇಮುದಾರನ ಪರ ಮಾನ್ಯ ವಕೀಲರು ವಾದಿಸಿದ್ದಾರೆ.ಅವನು ಆಪಾದಿತ ವಾಹನದಲ್ಲಿ ಕ್ಲೀನರ್ನಾಗಿ ಕಾರ್ಯ ನಿರ್ವಹಿಸುತ್ತಿದ್ದನು.ಆದರೆ, ನೋವು, ಯಾತನೆ, ಪ್ರಾಸಂಗಿಕ ವೆಚ್ಚಗಳು, ಮುಂದಿನ ದಿನಗಳಲ್ಲಿ ಗಳಿಕೆ ಸಾಮರ್ಥ್ಯದ ನಷ್ಟ, ಸೌಕರ್ಯಗಳ ನಷ್ಟ ಮತ್ತು ಮುಂದೆ ಮದುವೆ ಸಂಭಾವ್ಯತೆಗಳ ನಷ್ಟ, ಅವಕಾಶಗಳು ಕಡಿಮೆಯಾಗುವುದರ ಬಗ್ಗೆ ಶೀರ್ಷಿಕೆಗಳಡಿ ನಷ್ಟ ಪರಿಹಾರ ಕೊಡುವುದು ಕಡಿಮೆಯಾಗುತ್ತದೆ ಎಂದು ವಾದಿಸಿದ್ದಾರೆ.ನ್ಯಾಯಾಧಿಕರಣವು ನಿರ್ಧರಿಸಿರುವಂತೆ ಮಾಸಿಕ 6,000/- ರೂ.ಗಳಿಗೆ ಬದಲಾಗಿ ಮಾಸಿಕ 8,000/- ರೂ.ಗಳಲ್ಲಿ ಗಾಯಾಳುವಿನ ಸಂಬಳವನ್ನು ಅರ್ಥೈಸುವುದರ ಮೇಲೆ ಈ ಎಲ್ಲಾ ಶೀರ್ಷಿಕೆಗಳಡಿ ನಷ್ಟ ಪರಿಹಾರವನ್ನು ಈ ನ್ಯಾಯಾಲಯವು ಹೆಚ್ಚಿಸಬಹುದೆಂದು ಅವರು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ಅಸಮರ್ಥತೆಯ ಶೇಕಡಾವಾರನ್ನು ನ್ಯಾಯಾಧಿಕರಣದಿಂದ ನಿರ್ಧರಿಸಲಾಗಿರುವಂತೆ ಶೇ .100 ಎಂಬುದಾಗಿ ಪರಿಗಣಿಸಬೇಕೇ ಹೊರತು ಶೇ .70 ಎಂದಲ್ಲ ಎಂದು ಅವರು ವಾದಿಸಿದ್ದಾರೆ.ಆದುದರಿಂದ, ಮೇಲೆ ಹೇಳಲಾದ ಅಂಶಗಳನ್ನು ಪರಿಗಣಿಸಲಾದಲ್ಲಿ ಮತ್ತು ಕ್ಲೇಮುದಾರನ ಪರವಾಗಿ ನಿರ್ಧಾರವಾದಲ್ಲಿ ನಷ್ಟಪರಿಹಾರದ ಮೊತ್ತವನ್ನು ಈ ಅಪೀಲಿನಲ್ಲಿ ಹೆಚ್ಚಿಸಲಾಗುವುದು ಎಂದು ಮಾನ್ಯ ವಕೀಲರು ವಾದಿಸಿದ್ದಾರೆ.

16. ಸದರಿ ವಾದಕ್ಕೆ ಉತ್ತರವಾಗಿ, ವಿಮಾ ಕಂಪನಿ/ 4 ನೇ ಎದುರುದಾರರ ಪರ ಮಾನ್ಯ ವಕೀಲರು ಕ್ಲೇಮುದಾರನು ಮಾಸಿಕ ಸಂಬಳವಾಗಿ ರೂ. 8,000/ತೆಗೆದುಕೊಳ್ಳುತ್ತಿದ್ದ ಸಂಗತಿಯನ್ನು ಸಮರ್ಥಿಸುವಲ್ಲಿ ಅವನು ಯಾವುದೇ ಸ್ಪಷ್ಟವಾದ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಕ್ಲೇಮುದಾರನ ಮಾಸಿಕ ಸಂಬಳದಂತೆಯೇ ನ್ಯಾಯಾಧಿಕರಣವು ಮಾಡಿದ ಅಸಮರ್ಥತೆಯ ನಷ್ಟದ ನಿರ್ಧಾರವು ಹೆಚ್ಚಿನದಾಗಿದೆ ಎಂದು ನಿವೇದಿಸಿದ್ದಾರೆ.

17. ವಿಮಾ ಇಲಾಖೆಯ ಪರ ಮಾನ್ಯ ವಕೀಲರು, ನಿರ್ದಿಷ್ಟವಾಗಿ ನ್ಯಾಯಾಧಿಕರಣವು ಮಾಸಿಕ ರೂ. 6,000/-ಗಳ ಕಾಲ್ಪನಿಕ ಮಾಸಿಕ ವೇತನವನ್ನು ನಿರ್ಧರಿಸಿರುವುದರಿಂದ ಪ್ರತಿ ತಿಂಗಳ ಸಂಬಳವನ್ನು ಪರಿಗಣನೆಗೆ

ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ನಷ್ಟ ಪರಿಹಾರ ನೀಡಿಕೆಯು, ಹೆಚ್ಚಿನ ಮಟ್ಟದ್ದಾಗಿದೆ ಎಂದು ನಿವೇದಿಸಿದ್ದಾರೆ.ಅಷ್ಟೇ ಅಲ್ಲದೆ, ಇತರ ಶೀರ್ಷಿಕೆಗಳ ಆಧಾರದ ಮೇಲೆ ನೀಡಲಾದ ಪರಿಹಾರವೂ ಸಹ ಹೆಚ್ಚಿನದಾಗಿದೆ.ಅದಷ್ಟೇ ಅಲ್ಲದೆ, ಅವರು, ಡಬ್ಲ್ಯುಸಿ.ಅಧಿನಿಯಮದ ಉಪಬಂಧಗಳಡಿ, ಕಾರ್ಯಾತ್ಮಕ ಅಸಮರ್ಥತೆಯು ಶೇ .50 ರಷ್ಟು ಎಂದು ನಿರ್ಧರಣೆಯಾಗಬೇಕಿತ್ತು.ಆದರೆ, ನ್ಯಾಯಾಧಿಕರಣವು ಅದನ್ನು ಶೇ .70 ಎಂದು ನಿರ್ಧರಣೆ ಮಾಡಿದ್ದು, ಅದು ಹೆಚ್ಚಿನದಾಗಿದೆಯೆಂದು ನಿವೇದಿಸಿದ್ದಾರೆ.ಅವರು, ಕ್ಲೇಮುದಾರನ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಯಿಲ್ಲ ಹಾಗೂ ಅದನ್ನು ವಜಾ ಮಾಡಬಹುದು ಎಂದು ನಿವೇದಿಸಿದ್ದಾರೆ.

18. ಆಯಾ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದು, ಈ ಅಪೀಲುಗಳಲ್ಲಿ ಪರಿಗಣನೆಗಾಗಿ ಈ ಕೆಳಗಿನ ವಿವಾದಾಂಶಗಳು ಉದ್ಭವಿಸುತ್ತವೆ:

(i) ಸದ್ಯದ ಪ್ರಕರಣದಲ್ಲಿ ನಷ್ಟ ಪರಿಹಾರ ನೀಡಿಕೆಯು ಅಪೀಲುದಾರ/ವಿಮಾ ಕಂಪನಿಗೆ ಸಂಬಂಧಪಡುವಷ್ಟರಮಟ್ಟಿಗೆ ಡಬ್ಲ್ಯು.ಸಿ.ಅಧಿನಿಯಮದಡಿ ಎಷ್ಟನ್ನು ಪಾವತಿಸಬಹುದೋ ಅಷ್ಟಕ್ಕೇ ಮಾತ್ರ ನಿರ್ಬಂಧಿಸಬೇಕೆ?ಮತ್ತು ಆ ಮೂಲಕ ಬಾಕಿ ಇರುವ ನಷ್ಟ ಪರಿಹಾರವನ್ನು ಪಾವತಿಸಲು ಆಪಾದಿಸಲಾದ ವಾಹನದ ಮಾಲೀಕ/ಪಾಲಿಸಿದಾರನ ಮೇಲೆ ಹೊಣೆಯನ್ನು ಹೊರಿಸುವುದೆ?

(ii) ಅಪೀಲುದಾರ-ಮುದಾರನು ಹೆಚ್ಚುವರಿ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ?

(iii) ಯಾವ ಆದೇಶ?

ವಿವಾದಾಂಶಸಂಖ್ಯೆ: 1

19. ವಿವಾದಾಂಶಸಂಖ್ಯೆ: 1 ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಯಾವುದೇ ಹೆಚ್ಚುವರಿ ಪ್ರೀಮಿಯಂನ ಪಾವತಿಯಾಗಿಲ್ಲದಿದ್ದಾಗ, ವಿಮಾ ಕಂಪನಿಯ ಮತ್ತು ವಿಮಾದಾರ ಕೆಲಸಗಾರನ ಪರಸ್ಪರ ಹೊಣೆಗಾರಿಕೆಯು ಡಬ್ಲ್ಯು.ಸಿ.ಅಧಿನಿಯಮದ ಉಪಬಂಧಗಳಡಿ ನಿರ್ಧರಿಸಲಾದಂತೆ ಮಾತ್ರ ಇರುತ್ತದೆ ಎಂಬುದು ಅಪೀಲುದಾರ/ವಿಮಾ ಕಂಪನಿಯ ಪರ ಮಾನ್ಯ ವಕೀಲರ ವಾದವಾಗಿದ್ದರೂ, ಮತ್ತು ಅದನ್ನು ನಿರ್ಬಂಧಿಸಲೇಬೇಕಿದ್ದಾಗ, ಸದ್ಯದ ಪ್ರಕರಣದಲ್ಲಿ ಅಂಥ ನಿರ್ದಿಷ್ಟವಾದ ಪ್ರತಿವಾದ ಅಥವಾ ವಾದವನ್ನು ವಿಮಾಕರ್ತನು ಲಿಖಿತ ಹೇಳಿಕೆಯಲ್ಲಿ ಮಂಡಿಸಿಲ್ಲ ಎಂಬುದು ನಮಗೆ ಕಂಡುಬಂದಿದೆ.ವಿಮಾ ಕಂಪನಿಯು ಅಂಥ ಪ್ರತಿವಾದವನ್ನು ಮಂಡಿಸದಿದ್ದ ಪಕ್ಷದಲ್ಲಿ, ನ್ಯಾಯಾಧಿಕರಣವು ನೀಡಬೇಕಾದ ನಷ್ಟ ಪರಿಹಾರವನ್ನು ಡಬ್ಲ್ಯು.ಸಿ.ಅಧಿನಿಯಮದ ಉಪಬಂಧಗಳಡಿ ನಿರ್ಬಂಧಿಸಲಾಗದೆಂಬ ಮತ್ತು ಕ್ಲೇಮುದಾರನು ಡಬ್ಲ್ಯು.ಸಿ.ಅಧಿನಿಯಮದಡಿ ಎಷ್ಟು ನಿರ್ಧಾರವಾಗಿದೆಯೋ ಅದಕ್ಕಿಂತ ಹೆಚ್ಚಿನ ನಷ್ಟಪರಿಹಾರಕ್ಕೆ ಹಕ್ಕುಳ್ಳವನಾಗಿದ್ದನೆಂಬ ಸಂಗತಿಯನ್ನು ಸಾಬೀತುಪಡಿಸುವ ಹೊಣೆಯನ್ನು ಹೊಂದಿರಲಿಲ್ಲ.

20. ಈ ಸಂಬಂಧ, ನಾವು ರಾಮಚಂದ್ರ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿವರವಾಗಿ ಪರಿಶೀಲಿಸಿದ್ದೇವೆ.ಆ ಪ್ರಕರಣದಲ್ಲಿ ನಿರ್ಧರಿಸಲಾದ ಕಾನೂನಿನ ಗಣನೀಯ ಪ್ರಶ್ನೆಯೆಂದರೆ, ಕ್ಲೇಮುದಾರನಿಗೆ ಪಾವತಿಸಬಹುದಾದ ನಷ್ಟಪರಿಹಾರದ ಮೊತ್ತವನ್ನು ಡಬ್ಲ್ಯು.ಸಿ.ಅಧಿನಿಯಮದ ಅಡಿಯಲ್ಲಿ ಅಂಗೀಕಾರಾರ್ಹವಾದ ಮೊತ್ತಕ್ಕೆ ಸೀಮಿತಗೊಳಿಸಿರುವ ಈ ನ್ಯಾಯಾಲಯದ ತೀರ್ಮಾನವು ಸರಿಯೇ?ಅದರಲ್ಲಿನ ಕ್ಲೇಮುದಾರನು ಎಂ.ವಿ. ಅಧಿನಿಯಮದಡಿ ಪಾವತಿಸಬಹುದಾದ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದನೆ?ಎಂಬುದಾಗಿದೆ.ಸದರಿ ಪ್ರಕರಣದಲ್ಲಿ ವಿಮಾ ಕಂಪನಿಯು ಉಚ್ಚ ನ್ಯಾಯಾಲಯದ ಮುಂದೆ ಚ ವಿಮಾ ಪಾಲಿಸಿಯನ್ನು ಹಾಜರುಪಡಿಸಿಲ್ಲ ಅಥವಾ ಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳ ಅನುಸಾರ, ಹೆಚ್ಚುವರಿ ಪ್ರೀಮಿಯಂ ಅನ್ನು ಪಾವತಿಸಿಲ್ಲವೆಂಬುದನ್ನು ಸಾಬೀತುಪಡಿಸಲು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ ಎಂಬ ಸಂಗತಿಯನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಗಮನಿಸಿದೆ.ಚ

21. ಸದರಿ ತೀರ್ಪಿನ 22, 23 ಮತ್ತು 24 ನೇ ಕಂಡಿಕೆಗಳು ಸಮಂಜಸವಾಗಿವೆ ಹಾಗೂ ಅವುಗಳನ್ನು ಈ ಕೆಳಗಿನಂತೆ ಉದ್ಧೃತಗೊಳಿಸಲಾಗಿದೆ:

"22. ಆದುದರಿಂದ, ನಷ್ಟಪರಿಹಾರದ ಮೊತ್ತವನ್ನು ವಿಮಾಕರ್ತ/ವಿಮಾ ಕಂಪನಿ ಹಾಗೂ ವಿಮಾದಾರ/ವಾಹನದ ಮಾಲೀಕ ಇವರಿಬ್ಬರ ನಡುವೆ ಸರಿಯಾಗಿ ಹ ೦ ಚಿಕೆ ಮಾಡಬಹುದೆ?ಎಂಬುದು

ಪ್ರಶ್ನೆಯಾಗಿದೆ.ಹಾಗಿದ್ದರೂ, ವಾಹನದ ಮಾಲೀಕನು ನ್ಯಾಯಾಧಿಕರಣದ ಮು ಂ ದೆ ಹಾಜರಾಗಿಲ್ಲ.ಆದರೆ, ವಿಮಾ ಕಂಪನಿಯು ನ್ಯಾಯಾಧಿರಣದ ಮುಂದೆ ವಿಷಯವು ಮುಂದುವರೆಯಲು ಅನುಮತಿಸಿದೆ ಮತ್ತು ಎದುರುದಾರ/ವಿಮಾ ಕಂಪನಿಯು ಉಚ್ಚ ನ್ಯಾಯಾಲಯದಲ್ಲಿ ಅಪೀಲು ಹೂಡಿದಾಗ, ವಿಮಾದಾರ/ವಾಹನದ ಮಾಲೀಕನು ಹಾಜರಾಗಲು ಮತ್ತೊಮ್ಮೆ ವಿಫಲನಾಗಿದ್ದಾನೆ.ಆದರೆ, ಎದುರುದಾರ-ವಿಮಾ ಕಂಪನಿಯು ಅವನ ಹಾಜರಾತಿಯನ್ನು ಅನುಸರಣೆ ಮಾಡಿಲ್ಲ.ಹಾಗಿದ್ದರೂ, ಉಚ್ಚ ನ್ಯಾಯಾಲಯವು, ವಾಹನದ ಮಾಲೀಕ ಮತ್ತು ವಿಮಾ ಕಂಪನಿ ನಡುವೆ ನಷ್ಟ ಪರಿಹಾರದ ಮೊತ್ತದ ಹಂಚಿಕೆಯು ವಿಮಾ ಕಂಪನಿ ಮತ್ತು ವಿಮಾದಾರ/ವಾಹನದ ಮಾಲೀಕನ ನಡುವೆ ಪರಸ್ಪರ ಆಂತರಿಕ ವಿವಾದವಾಗಿತ್ತೆಂದು ಮತ್ತು ಆದುದರಿಂದ, ವಾಹನದ ವಿಮಾದಾರ/ಮಾಲೀಕನು ಹಾಜರಾಗಿಲ್ಲದ ಕಾರಣಕ್ಕೆ, ಏನೇ ಆದರೂ ನ್ಯಾಯಾಧಿಕರಣದಿಂದ ನಿರ್ಧರಿಸಲಾದ ನಷ್ಟ ಪರಿಹಾರದ ಮೊತ್ತಕ್ಕೆ ಕ್ಲೇಮುದಾರನೇ ಹಕ್ಕುಳ್ಳವನಾದ್ದರಿಂದ ಕ್ಲೇಮುದಾರನಿಗಾದ ಹಾನಿಗೆ, ಆದೇಶ ಜಾರಿಗೊಳಿಸಬಾರದಿತ್ತು ಎಂಬುದನ್ನು ಅಲಕ್ಷಿಸಿದೆ.ವಿಮಾ ಕಂಪನಿಯು ಪರಿಸ್ಥಿತಿಯೊಂದಿಗೆ ಕೈಜೋಡಿಸಿ, ವ್ಯವಹರಣೆಯು ಮು ಂ ದುವರೆಯಲು ಅನುಮತಿಸಿದಲ್ಲಿ, ವಿಮಾದರ/ವಾಹನದ ಮಾಲೀಕನ ಅನುಪಸ್ಥಿತಿಯಲ್ಲಿಯೂ ಸಹ ವಿಮಾದಾರನು ಹೆಚ್ಚಿನ ಪ್ರೀಮಿಯಂ ಅನ್ನು ಪಾವತಿಸಲು ಬದ್ಧನಾಗಿರಬಹುದಾದರೂ, ಮೊತ್ತವನ್ನು ಪಾವತಿಸಲು ಬದ್ಧನಾಗಿದ್ದಾನೆಂದು ತೀರ್ಮಾನಿಸಲಾಗಿದ್ದು, ಅದರ ಪರಿಣಾಮವಾಗಿ, ವಿಮಾ ಕಂಪನಿಯು ಸ್ಪಷ್ಟವಾಗಿ ಅವರ ಹೊಣೆಯನ್ನು ಭರಿಸಬೇಕಾಗುತ್ತದೆ ಮತ್ತು ಕ್ಲೇಮುದಾರನಿಗೆ ತೊಂದರೆ ಕೊಡಬಾರದು.

23. ಹೀಗಾಗಿ, ಉಚ್ಚ ನ್ಯಾಯಾಲಯದ ಮುಂದೆ ಅಪೀಲು ಇರುವ ಹಂತದಲ್ಲಿ ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿಯಲ್ಲಿ ಹೊಣೆಗಾರಿಕೆಯ ವ್ಯಾಪ್ತಿಯನ್ನು ಮೀರಿ ಯಾವುದೇ ನಷ್ಟ ಪರಿಹಾರಕ್ಕೆ ಕ್ಲೇಮುದಾರನು ಹಕ್ಕುಳ್ಳವನಾಗಿಲ್ಲವೆಂದು ಎಲ್ಲ ರೀತಿಯಲ್ಲೂ ಎದುರುದಾರ/ವಿಮಾ ಕ ಂ ಪನಿಯ ವಾದವೆಂದು ವಿಮಾದಾರ/ಮಾಲೀಕನಿಂದ ರೂ .32,091/-ಗಳನ್ನು ಮೀರಿದ ನಷ್ಟ ಪರಿಹಾರದ ಮೊತ್ತವನ್ನು ವಸೂಲಿ ಮಾಡಲು ಉಚ್ಚ ನ್ಯಾಯಾಲಯವು ವಿಮಾ ಇಲಾಖೆಗೆ ಅವಕಾಶ ಚ ಕೊಡುವುದರಲ್ಲಿ ಯಾವುದೇ ಕಾನೂನು ಸಮರ್ಥನೆ ನಮಗೆ ಕಂಡುಬಂದಿಲ್ಲ.ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದಡಿ ಕ್ಲೇಮುದಾರನ ಸಂದರ್ಭದಲ್ಲಿ ಹೊಣೆಗಾರಿಕೆಯ ವ್ಯಾಪ್ತಿಯನ್ನು ಮೀರಿ ಅವನು ಹಕ್ಕುಳ್ಳವನಾಗಿದ್ದಾನೆಂದು ತೀರ್ಮಾನಿಸಿ ನ್ಯಾಯಾಧಿಕರಣದ ಅಥವಾ ಉಚ್ಚ ನ್ಯಾಯಾಲಯದ ಮುಂದೆ ಚ ಎದುರುದಾರ/ವಿಮಾ ಕಂಪನಿಯು ಪರ್ಯಾಯ ವಾದವನ್ನು ಮಂಡಿಸಿರದಿದ್ದು, ಅದು ವಿಮಾ ಪಾಲಿಸಿಯಡಿ ವಿಮಾದಾರ/ಮಾಲೀಕನು ಯಾವುದೇ ಹೆಚ್ಚುವರಿ ಪ್ರೀಮಿಯಂ ಅನ್ನು ಪಾವತಿಸಿಲ್ಲವಾದ್ದರಿಂದ ಅದನ್ನು ಪಾವತಿ ಮಾಡಬೇಕಾಗಿಲ್ಲ.ವಿಮಾ ಕಂಪನಿಯು ವಿಚಾರಣಾ ನ್ಯಾಯಾಲಯಗಳ ಎಂದರೆ, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದ ಅಥವಾ ಉಚ್ಚ ನ್ಯಾಯಾಲಯದ ಮುಂದೆ ಯಾವುದೇ ವಾದವನ್ನು ಮಂಡಿಸಲು ವಿಫಲವಾಯಿತು ಮತ್ತು ಅದು ಒಂದು ವೇಳೆ, ಕೆಲಸಗಾರರ ನಷ್ಟಪರಿಹಾರ ಅಧಿನಿಯಮದ ಅಡಿಯಲ್ಲಿ ಪಾವತಿಸಬಹುದಾದ್ದನ್ನು ಮೀರಿ ಯಾವುದೇ ಹೆಚ್ಚಿನ ನಷ್ಟ ಪರಿಹಾರಕ್ಕೆ ಕ್ಲೇಮುದಾರನು ಹಕ್ಕುಳ್ಳವನಾದಲ್ಲಿ, ವಿಮಾದಾರ/ವಾಹನದ ಮಾಲೀಕನು ಯಾವುದೇ ಹೆಚ್ಚುವರಿ ಪ್ರಿಮೀಯಂ ಅನ್ನು ಪಾವತಿಸಿಲ್ಲದ ಕಾರಣ ಕರಾರು ಹೊಣೆಗಾರಿಕೆಯನ್ನು ಹೊಂದಿರದ ಕಾರಣ ಅದನ್ನು ಪಾವತಿಸುವ ಹೊಣೆ ವಿಮಾದಾರ ಮಾಲೀಕನದಾಗಿದೆ.ಹೀಗಾಗಿ ವಾದವನ್ನು ಎಂದೂ ಪರೀಕ್ಷೆಗೆ ಒಳಪಡಿಸಿಲ್ಲ ಅಥವಾ ಅದು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಪರಿಶೀಲನೆಗೆ ಹೋಗಿಲ್ಲ.ಏಕೆಂದರೆ, ವಿಮಾ ಕಂಪನಿಯು ಈ ವಾದವನ್ನು ಕೈಗೆತ್ತಿಕೊಂಡೂ ಇಲ್ಲ ಹಾಗೂ ಅಪೀಲು ಹಂತದಲ್ಲೇ ನೇರವಾಗಿ ವಿಮಾ ಕಂಪನಿಯ ಈ ವಾದವನ್ನು ಅ ಂ ಗೀಕರಿಸಲು ಉಚ್ಚ ನ್ಯಾಯಾಲಯಕ್ಕೆ ಕಾರಣವನ್ನು ನೀಡುವಷ್ಟರಮಟ್ಟಿಗೆ ಯಾವುದೇ ಸಾಕ್ಷ್ಯವನ್ನೂ ಒದಗಿಸಿಲ್ಲ.

24. ತತ್ಪರಿಣಾಮವಾಗಿ, ವಾಹನದ ಮಾಲೀಕನು ಹೆಚ್ಚುವರಿ ಪ್ರೀಮಿಯಂ ಅನ್ನು ಪಾವತಿಸದಿರುವುದಕ್ಕೆ ಸಂಬಂಧಿಸಿದಂತೆ ಪರ್ಯಾಯ ವಾದವನ್ನು ಮಂಡಿಸಲೂ ಸಹ ಎದುರುದಾರ/ವಿಮಾ ಕಂಪನಿಯು ವಿಫಲವಾಗಿದ್ದಾಗ ಮತ್ತು ನೋಟೀಸು ನೀಡಿದ್ದರೂ ಸಹ, ವಾಹನದ ಮಾಲೀಕನು ಹಾಜರಾಗಲು ವಿಫಲನಾಗಿದ್ದು, ಅದು ಸಮರ್ಥಿಸಲು ತಕ್ಕುದಲ್ಲವೆಂಬ ಸ ಂ ಗತಿಗೆ ಹೊಂದಿಕೆ ಮಾಡಿದ್ದಾಗಲೂ ಸಹ, ಉಚ್ಚ ಚ ನ್ಯಾಯಾಲಯದ ಮುಂದೆ ಅಪೀಲಿನ ತಡವಾದ ಹಂತದಲ್ಲಿ ವಾಹನದ ಮಾಲೀಕನಿಂದ ನಷ್ಟ ಪರಿಹಾರವನ್ನು ವಸೂಲಿ ಮಾಡಲು ಎದುರುದಾರ/ವಿಮಾ ಕಂಪನಿಗೆ ಅವಕಾಶ ನೀಡಲಾಗುವ ಹಾಗೆ, ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದಡಿ ಹಕ್ಕನ್ನು ಮೀರಿ, ಮೋಟಾರು ವಾಹನಗಳ ಅಧಿನಿಯಮದಡಿ ಯಾವುದೇ ನಷ್ಟ

ಪರಿಹಾರಕ್ಕೆ ಕ್ಲೇಮುದಾರ/ಅಪೀಲುದಾರನು ಹಕ್ಕುಳ್ಳವನಾಗಿಲ್ಲವೆ ಂ ದು ಉ ಚ ಚ ನ್ಯಾಯಾಲಯವು ಸೂಚ್ಯವಾಗಿ ಅಭಿಪ್ರಾಯಪಟ್ಟಿದೆ."

22. ಸದರಿ ತೀರ್ಪನ್ನು ಓದಿದಾಗ, ಡಬ್ಲ್ಯುಸಿ ಅಧಿನಿಯಮದಡಿ ಏನನ್ನು ಪಾವತಿಸಬಹುದಾಗಿರುತ್ತದೆಯೋ ಅದನ್ನು ಮೀರಿದ ಯಾವುದೇ ನಷ್ಟ ಪರಿಹಾರವನ್ನು ಪಾವತಿಸಲು ವಿಮಾ ಕಂಪನಿಯು ಹಕ್ಕುಳ್ಳದ್ದಾಗಿಲ್ಲವೆಂಬಷ್ಟರಮಟ್ಟಿಗೆ ನ್ಯಾಯಾಧಿಕರಣದ ಮುಂದೆ ಅದು ಯಾವುದೇ ವಾದವನ್ನು ಮಂಡಿಸಲು ವಿಫಲವಾಗಿದ್ದಾಗ ಮತ್ತು ವಿಮಾದಾರ ಮಾಲೀಕನು ಯಾವುದೇ ಹೆಚ್ಚುವರಿ ಪ್ರೀಮಿಯಂ ಅನ್ನು ಪಾವತಿಸದಿದ್ದುದರಿಂದ ಕರಾರುಜನ್ಯ ಹೊಣೆಗಾರಿಕೆಯನ್ನು ಅದು ಹೊಂದಿಲ್ಲದ ಕಾರಣದಿ ಂ ದ ವಿಮಾದಾರ ಮಾಲೀಕನು ಮಾಲೀಕನು ಅದನ್ನು ಅದನ್ನು ಪಾವತಿಸಲು ಹೊಣೆಗಾರನಾಗಿದ್ದಾನೆಂದು, ವಿಮಾ ಕಂಪನಿಯ ಕಡೆಯಿಂದಾದ ಸದರಿ ವಿಫಲತೆಯನ್ನು, ಅಪೀಲು ಹಂತದಲ್ಲಿ ಮೊಟ್ಟ ಮೊದಲ ಬಾರಿಗೆ ವಾದವನ್ನು ಮಂಡಿಸುವ ಮೂಲಕ ವಿಮಾ ಕಂಪನಿಯು ಅದರ ಪ್ರಯೋಜನವನ್ನು ಪಡೆಯಲಾಗದು ಎಂದು ಸ್ಪಷ್ಟವಾಗುತ್ತದೆ.

23. ಹಿಂದೆ ಹೇಳಲಾದ ತೀರ್ಮಾನದಲ್ಲಿ, ಸಹಜವಾಗಿಯೇ, ಅಂಥ ವಾದವನ್ನು ಈ ನ್ಯಾಯಾಲಯದ ಮುಂದೆ, ಎಂದರೆ, ಅಪೀಲು ಹಂತದಲ್ಲಿಯೂ ಮಂಡಿಸಿಲ್ಲ ಮತ್ತು ಅದನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ಮಂಡಿಸಲಾಯಿತು.ಆದರೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯೋಕ್ತಿಯು, ಯಾವುದೇ ವಾದವನ್ನು ಮಂಡಿಸದಿದ್ದಾಗ ಅಥವಾ ಅಂಥ ವಾದದ ಮೇಲೆ ಯಾವುದೇ ಸಾಕ್ಷ್ಯವನ್ನು ಅಷ್ಟರಮಟ್ಟಿಗೆ ಮಂಡಿಸಿದಾಗ, ಮೊದಲ ಬಾರಿಗೇ ಅದು ನೇರವಾಗಿ ಅಪೀಲು ಹಂತಕ್ಕೆ ಏರಲು ಸಾಧ್ಯವಿಲ್ಲ.ಸದ್ಯದ ಪ್ರಕರಣದಲ್ಲಿ ನಿಶಾನೆ ಪಿ .5/ವಿಮಾ ಪಾಲಿಸಿಯ ಪ್ರತಿಯನ್ನು ನ್ಯಾಯಾಧಿಕರಣದ ಮುಂದೆ ಹಾಜರುಪಡಿಸಿದ್ದರೂ ಸಹ, ನಿರ್ದಿಷ್ಟವಾಗಿ ಯಾವುದೇ ಪ್ರತಿವಾದ ಅಥವಾ ವಾದವನ್ನು ಮಂಡಿಸದಿದ್ದಲ್ಲಿ, ಆ ಸಂಬಂಧ, ಯಾವುದೇ ಸಾಕ್ಷ್ಯವನ್ನು ಸ್ವೀಕರಿಸಲಾಗಿರುವುದಿಲ್ಲ.

24. ಈ ಸಂಬಂಧ, ರಾಮಕೃಷ್ಣ ರೆಡ್ಡಿ -ವಿರುದ್ಧ-ಮ್ಯಾನೇಜರ್, ಪರ್ಚೇಸ್, ಎಚ್‌ಎಂಟಿ ಅಮಿಟೆಡ್ ಬೆಂಗಳೂರು ಮತ್ತು ಇನ್ನೊಬ್ಬರು - ಐ.ಎಲ್.ಆರ್. 2002 ಕೆ.ಎ.ಆರ್. 1905, ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಅವಲಂಬಿತರಾಗಬಹುದಿದ್ದು, ಅದರಲ್ಲಿ, ನಿರ್ದಿಷ್ಟವಾಗಿ ವಿಮಾ ಕಂಪನಿಯ ಪ್ರತಿವಾದಕ್ಕೆ ಸಂಬಂಧಿಸಿದಂತೆ ಅಥವಾ ನ್ಯಾಯಾಧಿಕರಣದ ಮುಂದೆ ಅಂಥ ವಾದವನ್ನು ಚರ್ಚಿಸುವ ಅವಕಾಶವು ಕ್ಲೇಮುದಾರನಿಗೆ ಇಲ್ಲವಾದ್ದರಿಂದ, ಪಾಲಿಸಿಯ ಅಡಿಯಲ್ಲಿ ಹಾನಿ ಸಂಭವವನ್ನು ಒಳಗೊಂಡಿರಲಿಲ್ಲವೆಂಬಷ್ಟರಮಟ್ಟಿಗೆ, ಅಪೀಲಿನಲ್ಲಿ ಯಾವುದೇ ಹೊಸ ವಾದಗಳನ್ನು ಮಂಡಿಸಲು ಅನುಮತಿಸಕೂಡದೆಂದು ಅಭಿಪ್ರಾಯಪಡಲಾಗಿದೆ.ವಿಮಾ ಕಂಪನಿಯ ಲಿಖಿತ ಹೇಳಿಕೆಯು, ಲಭ್ಯವಿರುವ ಎಲ್ಲಾ ಪ್ರತಿವಾದಗಳು, ವಾದಗಳು ಹಾಗೂ ಚರ್ಚೆಗಳನ್ನು ಒಳಗೊಂಡಿರತಕ್ಕದ್ದು.ಈ ಸಂದರ್ಭದಲ್ಲಿ 19 ನೇ ಕಂಡಿಕೆಯು ಸೂಕ್ತವಾದುದಾಗಿದ್ದು, ಅದನ್ನು ಈ ಕೆಳಗಿನಂತೆ ಉದ್ಧರಿಸಲಾಗಿದೆ:

"19. ಎಲ್ಲವನ್ನೂ ಮತ್ತು ಪ್ರತಿಯೊಂದನ್ನೂ ನಿರಾಕರಿಸುವ ಒಂದೇ ಮಾದರಿಯ ಲಿಖಿತ ಹೇಳಿಕೆಗಳನ್ನು ದಾಖಲಿಸುವಲ್ಲಿ ವಿಮಾ ಕಂಪನಿಗಳ ಕೆಲವು ಶಾಖೆಗಳ ಮಾರಕ ಅಭ್ಯಾಸವನ್ನೂ ಸಹ ನಾವು ಈ ಹಂತದಲ್ಲಿ ಉಲ್ಲೇಖಿಸಬಹುದಾಗಿದೆ.ಅವು ಮಾಮೂಲಾಗಿ ವಿಮೆಯನ್ನು ನಿರಾಕರಿಸಿ, ನಂತರ ವಿಮೆ ಮಾಡಿಸಿದ್ದರೂ, ಆ ಪಾಲಿಸಿಯ ನಿಬಂಧನೆಗಳ ಉಲ್ಲಂಘನೆಯಾಗಿತ್ತೆಂದು, ಚಾಲಕನು ಸಿಂಧುವಾದ ಚಾಲನಾ ಪರವಾನಗಿ ಹೊಂದಿರಲಿಲ್ಲವೆಂದು, ಮತ್ತು ಕೊನೆಯದಾಗಿ, ವಿಮೆ ಮಾಡಿಸಿದ್ದ ವಾಹನದ ಚಾಲಕನ ಕಡೆಯಿಂದ ಯಾವುದೇ ನಿರ್ಲಕ್ಷ್ಯವಾಗಿಲ್ಲ ಎಂದು ಪರ್ಯಾಯವಾಗಿ ವಾದಿಸಲಾಗಿದೆ.ವಿಮಾ ಪಾಲಿಸಿಯು ಅಪಾಯವನ್ನು (ರಿಸ್ಕ್) ಒಳಗೊಂಡಿದೆಯೇ? ಅಥವಾ ಇಲ್ಲವೇ?ಎಂಬುದನ್ನು ಹಾಗೂ ಚಾಲಕನು ವಾಹನ ಪರವಾನಗಿಯನ್ನು ಹೊಂದಿದ್ದನೇ?ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಗಮನ ಹರಿಸಿಲ್ಲ.ವಿಮಾಕರ್ತರು ತಮ್ಮ ವಕೀಲರಿಗೆ ಸೂಚನೆಗಳನ್ನು ನೀಡುವಾಗ, ಪೂರ್ಣ ಮಾಹಿತಿ ಬೇಕಿದ್ದಾಗ ಅದು ಕೆಲವೊಮ್ಮೆ ಅವರಲ್ಲಿ ಇರುವುದಿಲ್ಲವೆಂಬುದನ್ನು ನಾವು ಗುರುತಿಸಿದ್ದೇವೆ ಮತ್ತು ಆದ್ದರಿಂದ, ಆಕ್ಷೇಪಣೆಗಳು ಸಾಮಾನ್ಯ ಸ್ವರೂಪದಲ್ಲಿರಬಹುದು.ಎಲ್ಲಾ ಅನುಮತೀಯವಾದ ರಕ್ಷಣೆಗಳನ್ನು ಕೈಗೊಳ್ಳುವ ಪಕ್ಷಕಾರರ ಮೇಲೆ ನಾವು ಕೋಪ ಮಾಡಿಕೊಳ್ಳಲಾಗುವುದಿಲ್ಲ.ಆದರೆ, ಮೋಟಾರು ಅಪಘಾತ ಕ್ಲೇಮುಗಳಿಗಾಗಿನ ಅರ್ಜಿಗಳನ್ನು ವಿಮಾಕರ್ತರು ಸಾಮಾನ್ಯ ಖಾಸಗಿ ಪ್ರತಿಕೂಲ ದಾವೆಯನ್ನಾಗಿ ಪರಿಗಣಿಸಬಾರದಾಗಿದ್ದು, ಅಲ್ಲಿ ವಾದ ವಿವಾದ

ಪತ್ರಗಳಲ್ಲಿನ ತಾ ೦ ತ್ರಿಕ ವಾದಗಳು ಯಥೇಚ್ಛವಾಗಬಹುದು ಮತ್ತು ಅದರ ಏಕೈಕ ಉದ್ದೇಶವು ದಾವೆಯನ್ನು ಗೆಲ್ಲುವುದಾಗಿದೆ.ವಿಮಾ ಪಾಲಿಸಿಗಳ ಮೇರೆಗೆ ವಿಮಾಕರ್ತರು ಮೂರನೇ ಪಕ್ಷಕಾರರ ಬಗ್ಗೆ ಶಾಸನಬದ್ದ ಕಟ್ಟುಪಾಡುಗಳನ್ನು ನಿರ್ವಹಿಸುತ್ತಾರೆ.ಅಧಿನಿಯಮದ ಉದ್ದೇಶ ಮತ್ತು ಆಶಯವನ್ನು ಹಾಗೂ ಮೋಟಾರು ಅಪಘಾತಗಳಿಗೆ ಬಲಿಯಾದ ಅಸಹಾಯಕ ಸಂತ್ರಸ್ತರ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವರು ಹಾಗೆ ಮಾಡಬೇಕು.ಮೋಟಾರು ವಾಹನ ಅಧಿನಿಯಮದ ಅಡಿಯಲ್ಲಿ ವಿಮಾಕರ್ತರು ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವ ತಮ್ಮ ಕಾಳಜಿಯನ್ನು, ಸಾಮಾಜಿಕ ನ್ಯಾಯದ ಸಾಧನಗಳಾಗಿ ತಮ್ಮ ಬಾಧ್ಯತೆಗಳೊಂದಿಗೆ ಸಮತೋಲನಗೊಳಿಸಬೇಕು.

19.1 ಕ್ಲೇಮುದಾರರು ಸ್ವ-ಇಚ್ಛೆಯಿಂದ ವ್ಯಾಜ್ಯಕಾರರಾಗಿಲ್ಲ.ಆದರೆ, ಅನಿವಾರ್ಯವಾಗಿ ನ್ಯಾಯಾಧಿಕರಣವನ್ನು ಸಂಪರ್ಕಿಸಿದ್ದಾರೆ.ಏಕೆಂದರೆ ಸಂಸಾರ ನಿಭಾಯಿಸುವವನ ಸಾವಿನ ಅಥವಾ ತಾನೇ ಗಾಯಗೊಂಡ ಕಾರಣದಿಂದ ಹಾಗೆ ಮಾಡಬೇಕಾಗಿದೆ ಮತ್ತು ಅಪಘಾತವಾದ ವಾಹನದ ಮಾಲೀಕ ಹಾಗೂ ವಿಮಾಕರ್ತ ನಷ್ಟಪರಿಹಾರವನ್ನು ಪಾವತಿಸಲು ವಿಫಲರಾಗಿದ್ದಾರೆ.ಮಾಲೀಕನು ಹೊಂದಿರುವ ವಿಮಾ ಪಾಲಿಸಿಯ ವಿವರಗಳನ್ನು ಮತ್ತು ವಾಹನದ ಚಾಲಕನು ಹೊಂದಿರುವ ಚಾಲನಾ ಪರವಾನಗಿಯ ವಿವರಗಳನ್ನು ಪಡೆಯುವಲ್ಲಿ ಸಹ ಕ್ಲೇಮುದಾರರು ಅಸಹಾಯಕರಾಗಿದ್ದಾರೆಂಬುದನ್ನು ಹಾಗೂ ಅವರು ಈ ವಿವರಗಳಿಗಾಗಿ ಅವರು ಪೊಲೀಸರನ್ನೇ ಅವಲಂಬಿಸಿದ್ದಾರೆಂಬುದನ್ನು ವಿಮಾಕರ್ತನು ಗಮನದಲ್ಲಿಟ್ಟುಕೊಂಡಿರ ಬೇಕು. ಆದ್ದರಿಂದ, ವಿಮಾಕರ್ತನು ಯಾವುದೇ ವಿಮಾ ಪಾಲಿಸಿ ಇತ್ತೇ?ಅಥವಾ ಇರಲಿಲ್ಲವೇ?ಎಂಬುದನ್ನು, ಕೇಮಿಗೆ ಸಂಬಂಧಿಸಿದಂತೆ, ವಿಮಾಪಾಲಿಸಿಯ ವ್ಯಾಪ್ತಿಗೆ ಒಳಪಟ್ಟಿತ್ತೇ?ಅಥವಾ ಇಲ್ಲವೇ?ಎಂಬುದನ್ನು ಮತ್ತು ಚಾಲಕನು ಪರವಾನಗಿಯನ್ನು ಹೊಂದಿದ್ದನೇ?ಅಥವಾ ಇಲ್ಲವೇ?ಎಂಬುದನ್ನು ಆಕ್ಷೇಪಣಾ ಪಟ್ಟಿಯನ್ನು ಸಲ್ಲಿಸುವ ಮೊದಲು ಪರಿಶೀಲಿಸಬೇಕು ಮತ್ತು ವಿವಾದದ ವ್ಯಾಪ್ತಿಯನ್ನು ಕಡಿಮೆಗೊಳಿಸಬೇಕು.ಈ ಅಂಶಗಳನ್ನು ಪರಿಶೀಲಿಸದೆ ಮತ್ತು ಎಲ್ಲಾ ಅರ್ಜಿಯ ದೃಢೀಕ್ತಿಗಳನ್ನು ಯಾಂತ್ರಿಕವಾಗಿ ನಿರಾಕರಿಸಿದೆ, ವಿಮಾಕರ್ತರು ನುಣುಚಿಕೊಳ್ಳುವ (ಪ್ಲೇ ಇಟ್ ಸೇಫ್) ಲಿಖಿತ ಹೇಳಿಕೆಗಳನ್ನು ಸಲ್ಲಿಸಿದರೆ, ಅಧಿ ವಿಚಾರಣೆಯು ವಿಳಂಬವಾಗುತ್ತದೆ ಮತ್ತು ಕ್ಲೇಮುದಾರರನ್ನು ದುಃಖಕ್ಕೆ ಒಳಪಡಿಸಿದಂತಾಗುತ್ತದೆ ಮತ್ತು ಅಗತ್ಯವಾದ ಪರಿಹಾರವನ್ನು ಅನ್ಯಾಯವಾಗಿ ತಪ್ಪಿಸಿದಂತಾಗುತ್ತದೆ.ವಿಮಾಕರ್ತರು ಎಲ್ಲವನ್ನೂ ನಿರಾಕರಿಸಿರಿ ಮತ್ತು ಅವಾರ್ಡ್ ಸಿಂಡೋಮ್ಮಾಗಿ ಕಾಯಿರಿ ಎಂಬುದನ್ನು ತೊಡೆದುಹಾಕಲು ಮತ್ತು ಮೋಟಾರು ಅಪಘಾತದ ಕ್ಲೈಮುಗಳಲ್ಲಿ ಜವಾಬ್ದಾರಿಯುತ ಹಾಗೂ ಸ್ಪಂದಿಸುವ ವಿರೋಧಿಗಳಾಗುವ ಸಮಯ ಇದು. ವಿಮಾದಾರರಿಗೆ ನೀಡಲಾದ ವಿಮಾ ಪಾಲಿಸಿಗಳ ಅಡಿಯಲ್ಲಿ, ಮೂರನೇ ವ್ಯಕ್ತಿಗಳಿಗೆ ತಮ್ಮ ಶಾಸನಬದ್ದ ಹೊಣೆಗಾರಿಕೆಗಳನ್ನು ಗುರುತಿಸಲು ನಿರಾಕರಿಸುವ ವಿಮಾ ಕ ೦ ಪನಿಗಳ ಅಂಥ ಅಧಿಕಾರಿಗಳಿಗಾಗಿ ಮಾತ್ರ ಮೇಲ್ಕಂಡ ಅವಲೋಕನಗಳನ್ನು ಉದ್ದೇಶಿಸಲಾಗಿದೆ ಎಂದು ನಾವು ಸ್ಪಷ್ಟಪಡಿಸುತ್ತೇವೆ.

25. ಬಚ್ಚಣ್ ನಹರ್ ವಿರುದ್ದ ನೀಲಅಮಾ ಮಂಡಲ್ ಮತ್ತು ಇನ್ನೊಬ್ಬರು – (2008) 17 ಎಸ್.ಸಿ.ಸಿ. 491, ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಇನ್ನೊಂದು ತೀರ್ಪಿನ ಮೇಲೆಯೂ ಸಹ ಅವಲಂಬಿಸಬಹುದಾಗಿದ್ದು, ಅದರಲ್ಲಿ, ವಾದಪತ್ರಗಳಲ್ಲಿ ಎಂದೂ ಮಂಡಿಸಿರದಂಥ ವಾದವನ್ನು ಅದು ಎಷ್ಟೇ ಪ್ರಮಾಣದಲ್ಲಿದ್ದರೂ ಅದನ್ನು ಪರಿಶೀಲಿಸಲಾಗದು ಎಂದು ನಿರ್ದಿಷ್ಟವಾಗಿ ನಿರೂಪಿಸಲಾಗಿದೆ.ವಿವಾದಾಂಶದ ವಸ್ತುವಿಷಯವಾಗಿರದಂಥ ವಾದಪತ್ರಗಳಿಂದ ಉದ್ಭವಿಸಿರದ ಪ್ರಶ್ನೆಯನ್ನು ಎರಡನೇ ಅಪೀಲಿನಲ್ಲಿ ನ್ಯಾಯಾಲಯವು ನಿರ್ಧರಿಸಲಾಗದು.ಪಕ್ಷಕಾರರು ಹಾಜರುಪಡಿಸಿದ ವಾದಪತ್ರ, ಸಾಕ್ಷ್ಯ, ಯಾವುದಾದರೂ ಇದ್ದಲ್ಲಿ, ಅವುಗಳ ಅನುಪಸ್ಥಿತಿಯಲ್ಲಿ ಅದನ್ನು ಪರಿಗಣಿಸಲಾಗದು ಎಂಬಷ್ಟರಮಟ್ಟಿಗೆ ಸದರಿ ನಿರ್ಣಯದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ಹಿಂದಿನ ತೀರ್ಪುಗಳ ಮೇಲೆ ಅವಲಂಬಿಸಲಾಗಿದೆ.ಯಾವುದೇ ಪಕ್ಷಕಾರರೂ ತಮ್ಮ ವಾದವನ್ನು ಮೀರಿ ಮುಂದೆ ಸಾಗಲು ಅನುಮತಿಸತಕ್ಕದ್ದಲ್ಲ ಎಂಬಷ್ಟೇ, ಎಲ್ಲಾ ಅಗತ್ಯವಿರುವ ಮತ್ತು ಮುಖ್ಯವಾದ ಸಂಗತಿಗಳನ್ನು ಅದು ನಿರೂಪಿಸಿದ ವಾದದ ಸಮರ್ಥನೆಯಲ್ಲಿ ಆ ಪಕ್ಷವು ವಾದಿಸತಕ್ಕದ್ದೆಂಬುದೂ ಸಹ ಸುಸ್ಥಾಪಿತವಾದುದಾಗಿದೆ.

26. ನ್ಯಾಯಾಧಿಕರಣದ ಮುಂದೆ ಬರೀ ಒಂದು ನಿಶಾನೆಯಾಗಿ ಮಾತ್ರ ಪಾಲಿಸಿಯ ಗುರುತಿಸುವಿಕೆಯು, ಆ ಪಾಲಿಸಿಯಡಿ ಅದರ ಪರಿಮಿತಿಯ ಆಧಾರದ ಮೇಲೆ ಮುಂದುವರೆಯಲು ವಿಮಾ ಕಂಪನಿಯನ್ನು ಅರ್ಹಗೊಳಿಸಿರುವುದಿಲ್ಲ.ಪಾಲಿಸಿಯಿಂದ ಅಥವಾ ಅದರ ನಿಬಂಧನೆಗಳು ಮತ್ತು ಷರತ್ತುಗಳಿಂದ ಉದ್ಭವಿಸುವ ಯಾವುದೇ ನಿರ್ದಿಷ್ಟ ಪ್ರತಿವಾದದ ಆಧಾರದ ಮೇಲೆ ವಿಮಾಕರ್ತನು ಮುಂದುವರೆಯಬೇಕಾದಲ್ಲಿ,

ಕ್ಲೇಮುದಾರನಿಗೆ ಅದನ್ನು ಗಮನಿಸಲು ಮತ್ತು ಅದಕ್ಕೆ ಅಧಿವಿಚಾರಣಾ ಅವಧಿಯಲ್ಲಿ ಪ್ರತಿಕ್ರಿಯಿಸಲು ಸಾಧ್ಯವಾಗುವಂತೆ ಅದನ್ನು ಲಿಖಿತ ಹೇಳಿಕೆಯಲ್ಲಿ ಮಂಡಿಸಬೇಕು.ಇದರ ಪರಿಣಾಮವಾಗಿ, ವಿಮಾ ಕಂಪನಿಯ ಹೊಣೆಗಾರಿಕೆಯ ಮಿತಿಗಳ ಪ್ರತಿವಾದ ಅಥವಾ ವಿವಾದಕ್ಕೆ ಸಂಬಂಧಪಟ್ಟಂತೆ, ಲಿಖಿತ ಹೇಳಿಕೆಯಲ್ಲಿ ತೆಗೆದುಕೊಂಡ ಮನವಿಯ ಅನುಪಸ್ಥಿತಿಯಲ್ಲಿ, ಆ ನಿಟ್ಟಿನಲ್ಲಿ ಯಾವುದೇ ಪುರಾವೆಗಳನ್ನು ನೀಡುವುದನ್ನು ತಡೆಯಲಾಗುತ್ತದೆ.ಆದಾಗ್ಯೂ, ಪಾಲಿಸಿಯ ಪ್ರತಿಯನ್ನು ಗುರುತಿಸಿರಬಹುದಾಗಿದ್ದು, ಇದನ್ನು ವಾಹನದ ವಿಮಾ ರಕ್ಷಣೆಯನ್ನು (ಕವರೇಜ್) ಸುಸ್ಥಾಪಿಸುವ ಉದ್ದೇಶಕ್ಕಾಗಿ ಮಾತ್ರ, ಸಾಮಾನ್ಯವಾಗಿ, ಒಪ್ಪಿಗೆಯ ಮೂಲಕ ಮಾಡಲಾಗಿರುತ್ತದೆ.ಅಪೀಲು ಹಂತದಲ್ಲಿ, ಪಾಲಿಸಿಯ ಅಡಿಯಲ್ಲಿ ವಿಮಾ ಕಂಪನಿಯ ಬಾಧ್ಯತೆಯ ಪರಿಮಿತಿಗಳನ್ನು ಅದು ನಿರ್ಲಕ್ಷಿಸಿತ್ತು ಎಂಬಷ್ಟರಮಟ್ಟಿಗೆ ನ್ಯಾಯಾಧಿಕರಣದ ತೀರ್ಪಿನಲ್ಲಿ ವಿಮಾ ಕಂಪನಿಯು ತಪ್ಪು ಹುಡುಕಲು ಸಾಧ್ಯವಾಗುವುದಿಲ್ಲ.ಈ ಸನ್ನಿವೇಶಗಳಲ್ಲಿ, ಸದ್ಯದ ಪ್ರಕರಣದಲ್ಲಿ ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸುವುದು ಎಂದರೆ, ಪಾಲಿಸಿಯ ಪ್ರತಿಯ ಹಾಜರುಪಡಿಸುವಿಕೆಯನ್ನು ಕೋರಿ 2013 ರ ಐ.ಎ.ಸಂಖ್ಯೆ .2 ನ್ನು ಸಲ್ಲಿಸಿರುವುದು, ನಿಶಾನೆ ಪಿ .5 ಪಾಲಿಸಿಯನ್ನು ಈಗಾಗಲೇ ಹಾಜರುಪಡಿಸಲಾಗಿದೆ ಎನ್ನುವಷ್ಟೇ ಅತಿರೇಕವಾಗಿದೆ ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ ಮತ್ತು ವಿಮಾ ಕಂಪನಿಯು ತನ್ನ ಹೊಣೆಗಾರಿಕೆಯನ್ನು ಪರಿಮಿತಗೊಳಿಸಲು ಕೋರಿರುವಂಥ ಪಾಲಿಸಿಯ ನಿರ್ದಿಷ್ಟ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡಿರದ ಕವರ್ ನೋಟ್ ನಿಶಾನೆ ಆರ್ .1 ಹಾಗೂ ಪಾಲಿಸಿ ನಿಶಾನೆ ಆರ್ .5 ರ ಉದ್ಧೃತ ಭಾಗವನ್ನು ನ್ಯಾಯಾಧಿಕರಣದ ಮುಂದೆ ಹಾಜರುಪಡಿಸಲಾಗಿದ್ದರೂ, ಹಾಗೂ ಗುರುತು ಮಾಡಲಾಗಿದ್ದರೂ ಸಹ, ಲಿಖಿತ ಹೇಳಿಕೆಯಲ್ಲಿ ಮಂಡಿಸಲಾಗಿರುವ ನಿರ್ದಿಷ್ಟ ವಾದದ ಅನುಪಸ್ಥಿತಿಯಲ್ಲಿ, ಅದರಿಂದ ವಿಮಾಕರ್ತನಿಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ.ಆದುದರಿಂದ, ನಾವು ವಿವಾದಾಂಶ .1 ಕ್ಕೆ ಅಪೀಲುದಾರ/ವಿಮಾ ಕಂಪನಿಯ ವಿರುದ್ಧವಾಗಿ ಉತ್ತರಿಸುತ್ತೇವೆ.

27. ತತ್ಪರಿಣಾಮವಾಗಿ, ನಾವು ಐಎ.ಸಂಖ್ಯೆ:2/2013 ರಂತೆಯೇ ವಿಮಾ ಕಂಪನಿಯು ಸಲ್ಲಿಸಿದ ಅಪೀಲನ್ನು ವಜಾ ಮಾಡುತ್ತೇವೆ.ಈ ನ್ಯಾಯಾಲಯದ ಮುಂದೆ ಠೇವಣಿಯಲ್ಲಿರುವ ಮೊತ್ತವನ್ನು ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು.

ವಿವಾದಾಂಶಸಂಖ್ಯೆ: 2 ಮತ್ತು 3

28. ವಿವಾದಾಂಶಸಂಖ್ಯೆ: 2 ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಇದರಲ್ಲಿನ ಕ್ಲೇಮುದಾರ/ಅಪೀಲುದಾರನು ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿಯೂ ನಷ್ಟಪರಿಹಾರದ ಹೆಚ್ಚಳಕ್ಕೆ ಅದೇ ವಿಷಯವು ಸಂಬಂಧಪಡುತ್ತದೆ.ಕ್ಲೇಮುದಾರನ ಬಲಗಾಲಿಗೆ ತೀವ್ರವಾದ ಗಾಯಗಳಾಗಿದ್ದು, ಅದರ ಪರಿಣಾಮವಾಗಿ, ಕಾಲನ್ನು ಮಂಡಿಯವರೆಗೆ ಕತ್ತರಿಸಲಾಯಿತು ಮತ್ತು ತೊಡೆಯ ಸ್ನಾಯುಗಳ ಹಾನಿ ಹಾಗೂ ಕ್ಲೇಮುದಾರನಿಗೆ ಹಲವಾರು ಅನಾನುಕೂಲತೆಗಳುಂಟಾದವು ಎಂಬುದನ್ನು ನ್ಯಾಯಾಧಿಕರಣವು ಗಮನಿಸಿದೆ.ನಿಶಾನೆ ಪಿ .9 ರಲ್ಲಿ ಕ್ಲೇಮುದಾರನಿಗೆ ಸಂಬಂಧಿಸಿದಂತೆ ಗುರುತುಮಾಡಲಾದ ವಿಕಲಚೇತನ ಪ್ರಮಾಣಪತ್ರದಲ್ಲಿ, ಕೇಮುದಾರನು ಶೇ .80 ರಷ್ಟು ಕಾರ್ಯಸಂಬಂಧಿ ಅಂಗವಿಕಲತೆಯನ್ನು ಹೊಂದಿದ್ದಾನೆಂದು ನಮುದಿಸಲಾಗಿದೆ.ಹಾಗಿದ್ದರೂ, ನ್ಯಾಯಾಧಿಕರಣವು, ಇಡೀ ದೇಹಕ್ಕೆ ಶೇ .70 ರಷ್ಟು ಅಂಗವಿಕಲತೆಯನ್ನು ಪರಿಗಣಿಸಿದೆ ಮತ್ತು ಅದಕ್ಕನುಸಾರವಾಗಿ ರೂ. 10,70,200/-ಗಳ ನಷ್ಟ ಪರಿಹಾರವನ್ನು ಈ ಮುಂದಿನ ಶೀರ್ಷಿಕೆಗಳಲ್ಲಿ ನೀಡಿದೆ:

| **ಕ್ರಮ ಸಂಖ್ಯೆ** | **ನಷ್ಟ ಪರಿಹಾರದ ಶೀರ್ಷಿಕೆ** | **ನೀಡಿದ ಮೊತ್ತ** |
|---|---|---|
| ( i ) | ನೋವು ಮತ್ತು ಯಾತನೆ | * 50,000 / |
| ( ii ) | ವೈದ್ಯಕೀಯ ವೆಚ್ಚಗಳು | ₹ 75,000 / |
| ( iii ) | ಪರಿಚಾರಕ ಭತ್ಯೆಗಳು | ₹ 3,000 / |
| ( iv ) | ನರ್ಸಿಂಗ್ ಹಾಗೂ ಪಾಲನಾ ಭತ್ಯೆಗಳು | ₹ 5,000 / |
| ( v ) | ಚಿಕಿತ್ಸಾ ಅವಧಿಯಲ್ಲಿ ಗಳಿಕೆಯ ನಷ್ಟ | ₹ 12,000 / |

| | | |
|---|---|---|
| ( vi ) | ಭವಿಷ್ಯದ ಗಳಿಕೆಗಳ ನಷ್ಟ | 9,07,200 / |
| ( vii ) | ಸೌಕರ್ಯಗಳ ನಷ್ಟ | ₹ 5,000 / |
| ( vii ) | ಸಾರಿಗೆ ಭತ್ಯೆಗಳು | ₹ 3,000 / |
| ( ix ) | ಭವಿಷ್ಯದಲ್ಲಿ ಮದುವೆಯ ಸಂಭಾವ್ಯತೆ . | ₹ 10,000 / |
| | ಒಟ್ಟು | 10,70,200 / |

29. ಈ ಸಂಬಂಧ, ಮಂಡಿಯ ಹಂತದವರೆಗೆ ಕತ್ತರಿಸಿದ ಕಾರಣ ಬಲಗಾಲು ಇಲ್ಲವಾದ್ದರಿಂದ ಅಂಗವಿಕಲತೆಯು ಶೇ .100 ರಷ್ಟಿದೆ ಎಂದು ಭಾವಿಸಬೇಕೆಂದು ಅಪೀಲುದಾರ-ಕ್ಲೇಮುದಾರನ ಪರ ಮಾನ್ಯ ವಕೀಲರು ವಾದಿಸಿದ್ದಾರೆ.ತಮ್ಮ ನಿವೇದನೆಗೆ ಸಮರ್ಥನೆಯಾಗಿ ಅಪೀಲುದಾರನ ವಕೀಲರು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮೋಹನ್ ಸೋನಿ -ವಿರುದ್ಧ-ರಾಮ್ ಅವತಾರ್ ತೋಮರ್ ಮತ್ತು ಇತರರು - 2012 ಎಸಿ.ಜೆ. 583, (ಮೋಹನ್ ಸೋನಿ) ಪ್ರಕರಣದ ಮೇಲೆ ಅವಲಂಬಿತರಾಗಿದ್ದು, ಅದರಲ್ಲಿ, ಕಾಲನ್ನು ಕತ್ತರಿಸಿರುವ ಕಾರಣದಿಂದ, ಅವನ ಗಳಿಕೆ ಸಾಮರ್ಥ್ಯನಷ್ಟವು ಕೆಲವು ವೇಳೆ ಶೇ .100 ರಷ್ಟು ಹೆಚ್ಚಿರುತ್ತದೆ ಮತ್ತು ಯಾವುದೇ ಪ್ರಕರಣದಲ್ಲಿ ಅದು ಶೇ .90 ಕ್ಕಿಂತ ಕಡಿಮೆಯಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.ಆದುದರಿಂದ, ಈ ನ್ಯಾಯಾಲಯವು ನ್ಯೂನತೆಯನ್ನು ಕಡೇ ಪಕ್ಷ ಶೇ .90 ಎಂದು ಪರಿಗಣಿಸಬಹುದು ಮತ್ತು ಭವಿಷ್ಯದ ಗಳಿಕೆ ಸಾಮರ್ಥ್ಯನಷ್ಟದ ಶೀರ್ಷಿಕೆಯಡಿ ಹಾಗೂ ಇತರ ಶೀರ್ಷಿಕೆಗಳಡಿ ನಷ್ಟ ಪರಿಹಾರವನ್ನು ಹೆಚ್ಚಿಸಬಹುದು ಎಂದು ಅವರು ನಿವೇದಿಸಿದ್ದಾರೆ.

30. ವಿಮಾಕಂಪನಿ ಪರ ಮಾನ್ಯ ವಕೀಲರು, ಈ ಮೇಲೆ ಚರ್ಚಿಸಲಾದ ನಷ್ಟ ಪರಿಹಾರದ ಪ್ರಮಾಣವನ್ನು ಕುರಿತಂತೆ ತಮ್ಮ ನಿವೇದನೆಯನ್ನು ಪುನರುಚ್ಚರಿಸಿದ್ದಾರೆ ಮತ್ತು ಕ್ಲೇಮುದಾರನು ಸಲ್ಲಿಸಿದ ಅಪೀಲನ್ನು ವಜಾ ಮಾಡಬಹುದೆಂದು ವಾದಿಸಿದ್ದಾರೆ.

31.ದಿನಾಂಕ: 09.06.2011 ರಂದು ಸಂಭವಿಸಿದ ಅಪಘಾತದಲ್ಲಿ ಕ್ಲೇಮುದಾರನ ಬಲಗಾಲಿಗೆ ತೀವ್ರ ಗಾಯಗಳಾಗಿದ್ದು, ಅದರ ಪರಿಣಾಮವಾಗಿ, ಅವನ ಬಲಗಾಲನ್ನು ಮಂಡಿಯವರೆಗೆ ಕತ್ತರಿಸಬೇಕಾಯಿತು.ತೊಡೆಯ ಸ್ನಾಯುಗಳು ಹಾನಿಗೊಳಗಾದ್ದರಿಂದಾಗಿ, ಅವನ ಬಲಗಾಲು ನಿಷ್ಕ್ರಿಯವಾಯಿತು ಎಂಬುದರಲ್ಲಿ ಯಾವುದೇ ವಿವಾದವಿಲ್ಲ.ಅಲ್ಲದೆ, ಅದನ್ನು ಕ್ಲೇಮುದಾರನು ಸಾಬೀತುಪಡಿಸಿದ್ದಾನೆ.

32. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮೋಹನ್ ಸೋನಿ ಪ್ರಕರಣದಲ್ಲಿ, ಒಬ್ಬ ಕಡುಬಡವನಾದ ರೈತನ ಅಥವಾ ಒಬ್ಬ ಸೈಕಲ್ ರಿಕ್ಷಾ ಎಳೆಯುವವನ ಕಾಲನ್ನು ಕತ್ತರಿಸಿದ ಕಾರಣದಿಂದ ಉಂಟಾದ ನಷ್ಟವನ್ನು ಪರಿಗಣಿಸುವಾಗ, ಹೆಚ್ಚಿನ ಶೇಕಡಾವಾರು ಪ್ರಮಾಣದ ಅಂಗವಿಕಲತೆಯು ಗಳಿಕೆ ಸಾಮರ್ಥ್ಯದ ನಷ್ಟಕ್ಕೆ ಕಾರಣವಾಗುತ್ತದೆ ಎಂದು ಅಭಿಪ್ರಾಯಪಡಲಾಗಿದೆ.ಕೆಲವು ವೇಳೆ, ಅದು ಶೇ .100 ರವರೆಗೆ ಇರಬಹುದು.ಆದರೆ, ಶೇ .90 ಕ್ಕಿಂತ ಕಡಿಮೆಯಾಗಿರಕೂಡದು.

33. ಸಧ್ಯದ ಪ್ರಕರಣದಲ್ಲಿ, ಕ್ಲೇಮುದಾರನು ಆಪಾದಿತ ಲಾರಿಯ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ.ಅವನು ತನ್ನ ಬಲಗಾಲನ್ನು ಕಳೆದುಕೊಂಡಿದ್ದಾನೆ.ಅದರ ಪರಿಣಾಮವಾಗಿ, ಅವನು ಲಾರಿಯ ಕ್ಲೀನರ್ ಆಗಿ ಕೆಲಸ ಮುಂದುವರಿಸಲು ಸಾಧ್ಯವಿಲ್ಲ.ಈ ಸನ್ನಿವೇಶಗಳಲ್ಲಿ, ಕೇಮುದಾರನು ತನ್ನ ಕಾಲನ್ನು ಕಳೆದುಕೊಂಡಿದ್ದೇ ಅಲ್ಲದೆ, ಅವನ ತೊಡೆಯ ಸ್ನಾಯುಗಳೂ ಹಾನಿಗೊಳಗಾದ್ದರಿಂದ ಅಂಗವಿಕಲತೆಯ ಶೇಕಡಾವಾರು ಪ್ರಮಾಣ ಶೇ .100 ಅಲ್ಲದಿದ್ದರೂ ಕಡೇ ಪಕ್ಷ ಶೇ .90 ಇರಬೇಕಾಗುತ್ತದೆ ಮತ್ತು ಹೀಗಾಗಿ, ಇದು ಶೇ .100 ರಷ್ಟು ಕಾಲಿನ ನಷ್ಟವಾಗಿದೆ.ಆದುದರಿಂದ, ನ್ಯಾಯಾಧಿಕರಣವು ಅಂಗವಿಲತೆಯ ನಷ್ಟವನ್ನು ಶೇ .70 ರಷ್ಟು ಎಂದು ನಿರ್ಧರಿಸಿರುವುದು ಸರಿಯಲ್ಲ.ಅಂಗವಿಕಲತೆಯ ಶೇಕಡಾವಾರು ಪ್ರಮಾಣವನ್ನು ಶೇ .90 ಎಂದು ಭಾವಿಸಿದಲ್ಲಿ, ಆಗ ಭವಿಷ್ಯದ ಗಳಿಕೆ ಸಾಮರ್ಥ್ಯದ ನಷ್ಟವನ್ನು ಮರು ನಿರ್ಧರಣೆ ಮಾಡುವ ಅಗತ್ಯವಿರುತ್ತದೆ.ಈ ಸಂಬಂಧ, ಕ್ಲೇಮುದಾರನ ಮಾಸಿಕ ವೇತನವನ್ನು ರೂ .6000/-ದಷ್ಟು ನಿರ್ಧರಿಸಲಾಗಿದೆ.ಆದರೆ ಕ್ಲೇಮುದಾರನ ಮಾನ್ಯ ವಕೀಲರು ಅದನ್ನು ಮಾಸಿಕ ರೂ. 8,000/-ಎಂದು ನಿವೇದಿಸಿದ್ದಾರೆ.ಈ ಸನ್ನಿವೇಶಗಳಲ್ಲಿ, ಅದನ್ನು ಮಾಸಿಕ ರೂ

.8,000/-ಎಂದು ಸಾಬೀತುಪಡಿಸಲು ಯಾವುದೇ ನಿರ್ದಿಷ್ಟ ಸಾಕ್ಷ್ಯವಿಲ್ಲದ್ದರಿಂದಾಗಿ ಮಾಸಿಕ ವೇತನವನ್ನು ರೂ .6,000/-ಎಂದು ನಾವು ಪರಿಗಣಿಸುತ್ತೇವೆ.

34. ಸಂಜಯ್ಕುಮಾರ್ -ವಿರುದ್ಧ-ಅಶೋಕ್ ಕುಮಾರ್ ಹಾಗೂ ಇನ್ನೊಬ್ಬರು ಪ್ರಕರಣದಲ್ಲಿ, ಭವಿಷ್ಯದ ದೃಷ್ಟಿಕೋನದಿಂದ ಮಾಸಿಕ ವೇತನವನ್ನು ಹೆಚ್ಚಿಸಬೇಕೆಂದು ಹೇಳಲಾಗಿದೆ.ಅಪಘಾತದ ಸಮಯದಲ್ಲಿ ಕ್ಲೇಮುದಾರನಿಗೆ ಕೇವಲ 22 ವರ್ಷ. ಭವಿಷ್ಯದ ದೃಷ್ಟಿಯಿಂದ ರೂ .6,000/-ಕ್ಕೆ ಶೇ. 50 ರಷ್ಟು ಸೇರಿಸಲಾಗಿದೆ.ತತ್ಪರಿಣಾಮವಾಗಿ, ಮಾಸಿಕ ವೇತನವನ್ನು ರೂ .9,000/-ಎಂದು ನಿರ್ಧರಿಸಲಾಗಿದೆ.ಸದರಿ ಮೊತ್ತದ ಶೇ .90 ಎಂಬುದು ರೂ .8,100/-ಆಗಿದ್ದು, ಅದನ್ನು 12 ರಿಂದ ಗುಣಿಸಬೇಕಾಗುತ್ತದೆ ಮತ್ತು ಆ ನಂತರ ಸರಳಾ ವರ್ಮ -ವಿರುದ್ಧ ಡೆಲ್ಲಿ ಟ್ರಾನ್ಸ್ಪೋರ್ಟ್ ಕಾರ್ಪೋರೇಷನ್ ಅಮಿಟೆಡ್ - 2009 ಎಸಿಜೆ 1298, (ಸರಳಾ ವರ್ಮ) ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಮಾಣ ವಾಕ್ಯದ ಅನುಸಾರ ಸೂಕ್ತ ಚ ಗುಣಕವಾದ 18 ರಿಂದ ಗುಣಿಸಬೇಕಾಗುತ್ತದೆ.ತತ್ಪರಿಣಾಮವಾಗಿ, ಭವಿಷ್ಯದ ಗಳಿಕೆಯ ಸಾಮರ್ಥ್ಯದ ನಷ್ಟದ ಶೀರ್ಷಿಕೆಯಡಿ ನೀಡಲಾದ ನಷ್ಟಪರಿಹಾರವು ರೂ .17,49,600/ [ರೂ .8,100/- x 12 x 18] ಆಗಿದೆ.

35. ನೋವು ಮತ್ತು ಯಾತನೆ ಶೀರ್ಷಿಕೆಯಡಿ ನಷ್ಟ ಪರಿಹಾರವನ್ನು ರೂ .1,00,000/-ಕ್ಕೆ ಹೆಚ್ಚಿಸಲಾಗಿದೆ.ವೈದ್ಯಕೀಯ ವೆಚ್ಚಗಳ ಶೀರ್ಷಿಕೆಯಡಿ ನೀಡುವ ಮೊತ್ತವನ್ನು ರೂ .75,000/-ಕ್ಕೆ ಹೆಚ್ಚಿಸಲಾಗಿದೆ.ಕ್ಲೇಮುದಾರನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಹಾಗೂ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದುದರಿಂದ ಹಾಗೂ ಫಾಲೋಅಪ್ ಚಿಕಿತ್ಸೆಯನ್ನು ಪಡೆದಿರುವುದರಿಂದಾಗಿ ಪರಿಚಾರಕ ವೆಚ್ಚಗಳು, ಆಹಾರ ಮತ್ತು ಪೋಷಣೆ, ಸಾರಿಗೆ ಹಾಗೂ ಇತರ ವೆಚ್ಚಗಳು ಸೇರಿದಂತೆ ಪ್ರಾಸಂಗಿಕ ವೆಚ್ಚಗಳನ್ನು ರೂ .50,000/-ಕ್ಕೆ ಹೆಚ್ಚಿಸಲಾಗಿದೆ.ರೂ .1,00,000/-ವನ್ನು ಸೌಕರ್ಯಗಳ ನಷ್ಟಕ್ಕಾಗಿ ನೀಡಲಾಗಿದೆ.ಅಪಘಾತವಾದಾಗ ಕ್ಲೇಮುದಾರನ ವಯಸ್ಸು 22 ವರ್ಷಗಳಾಗಿರುವುದರಿಂದ ಮತ್ತು ಅವನಿಗೆ ಅಂಗವಿಕಲತೆ ಉಂಟಾಗಿದ್ದರಿಂದಾಗಿ, ಮದುವೆಯ ನಿರೀಕ್ಷಣೆಗಳ ನಷ್ಟಕ್ಕಾಗಿ ನೀಡುವ ನಷ್ಟಪರಿಹಾರವನ್ನು ರೂ .50,000/-ಕ್ಕೆ ಹೆಚ್ಚಿಸಲಾಗಿದೆ.ತತ್ಪರಿಣಾಮವಾಗಿ, ಒಟ್ಟು ನೀಡಿಕೆ ಮೊತ್ತವು ರೂ .21,24,600/-ಆಗಿದ್ದು, ಅದನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ:

| **ಕ್ರಮ ಸಂಖ್ಯೆ** | **ನಷ್ಟ ಪರಿಹಾರದ ಶೀರ್ಷಿಕೆ** | **ನೀಡಲಾದ ಮೊತ್ತ** |
|---|---|---|
| ( 1 ) | ನೋವು ಮತ್ತು ಯಾತನೆ | ₹ 1,00,000 / |
| ( 1 ) | ವೈದ್ಯಕೀಯ ವೆಚ್ಚಗಳು | ₹ 75,000 / |
| ( iii ) | ಪರಿಚಾರಕ , ಆಹಾರ , ನರ್ಸಿಂಗ್ ಮತ್ತು ಪೋಷಣಾ ವೆಚ್ಚಗಳು | ₹ 50,000 / |
| ( iv ) | ಸೌಕರ್ಯಗಳ ನಷ್ಟ | ₹ 1,00,000 / |
| ( V ) | ಭವಿಷ್ಯದ ಗಳಿಕೆಗಳ ನಷ್ಟ [ ರೂ . 8,100 / - X 12 X 18 X 90 % ] | ₹ 17,49,600 / |
| ( vi ) | ಮದುವೆಯ ನಿರೀಕ್ಷಣೆಗಳ ನಷ್ಟ | ₹ 50,000 / |
| | ಒಟ್ಟು | 21,24,600 / |

36. ಹೆಚ್ಚಿಸಿದ ನಷ್ಟಪರಿಹಾರವು, ವಸೂಲಾತಿಯವರೆಗೆ ಕ್ಲೇಮು ಅರ್ಜಿಯ ದಿನಾಂಕದಿಂದ ವಾರ್ಷಿಕವಾಗಿ ಶೇ .6 ರ ದರದಲ್ಲಿ ಬಡ್ಡಿಯನ್ನು ಹೊಂದಿರತಕ್ಕದ್ದು.ಹೆಚ್ಚಿಸಿದ ನಷ್ಟಪರಿಹಾರವನ್ನು ಈ ತೀರ್ಪಿನ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಠೇವಣಿ ಮಾಡತಕ್ಕದ್ದು.

37. ಹಾಗೆ ಠೇವಣಿಯನ್ನು ಮಾಡಿದ ಮೇಲೆ, ಇಡೀ ನಷ್ಟ ಪರಿಹಾರದ ಶೇ .75 ರಷ್ಟನ್ನು ಬಡ್ಡಿಯೊಂದಿಗೆ, 10 ವರ್ಷಗಳ ಪ್ರಾರಂಭಿಕ ಅವಧಿಗಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕು ಅಥವಾ ಅಂಚೆ ಕಚೇರಿಯಲ್ಲಿ ಠೇವಣಿ ಮಾಡತಕ್ಕದ್ದು.ಸದರಿ ಠೇವಣಿಯ ಮೇಲೆ ಅವನು ನಿಯತಕಾಲಿಕವಾಗಿ ಬಡ್ಡಿಯನ್ನು ಪಡೆಯಲು ಅರ್ಹನಾಗಿರತಕ್ಕದ್ದು.

38. ಫಲಿತಾಂಶವಾಗಿ, ಅಪೀಲುದಾರ/ಕ್ಲೇಮುದಾರನು ಸಲ್ಲಿಸಿದ ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ.ನ್ಯಾಯಾಧಿಕರಣವು ತೆಗೆದುಕೊಂಡ ನಿರ್ಣಯಗಳನ್ನು ಪುನರುಚ್ಚರಿಸುವ ಮೂಲಕ 4 ನೇ ಪ್ರತ್ಯಪೀಲುದಾರ/ವಿಮಾ ಕಂಪನಿ ಸಲ್ಲಿಸಿದ ಅಪೀಲನ್ನು ವಜಾ ಮಾಡಲಾಗಿದೆ ಎಂಬುದನ್ನು ಒತ್ತಿ ಹೇಳುವ ಅಗತ್ಯವಿಲ್ಲ.

ಈ ನ್ಯಾಯಾಲಯದಲ್ಲಿ ಠೇವಣಿ ಮಾಡಿರುವ ಮೊತ್ತವನ್ನು ಕೂಡಲೇ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು.